# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಹಂಪಿ ಟೈಮ್ಸ್ HAMPI TIMES Kannada Daily

BOOK SPACE
as your requirement
Special Offer Just For You!
Special Discount
And Free Creative
Support
SPECIAL OFFER
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 Volume:01 • ಸಂಚಿಕೆ:226 Issue:226 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 02.02.2024 02.02.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2


# ಆಗಸದಿಂದ ಹಂಪಿ ನೋಡಿ

**ಆರು ನಿಮಿಷದಲ್ಲಿ ಅಂಜನಾದ್ರಿ, ಹಂಪಿ ಸ್ಮಾರಕಗಳ ವೀಕ್ಷಣೆ । ಬೈಸ್ಕೈಗೆ ಹೆಚ್ಚುತ್ತಿದೆ ಬೇಡಿಕೆ**

**8 ನಿಮಿಷಕ್ಕೆ ರೂ.4299, 7 ನಿಮಿಷ ಹಾರಾಟಕ್ಕೆ ರೂ.3800 ಟಿಕೆಟ್‌ದರ ನಿಗದಿ । 2 ಹೆಲಿಕಾಪ್ಟರ್ ಹಾರಾಟ**



## ಹಂಪಿ ಉತ್ಸವ ಜಾಗೃತಿ ಬೈಕ್ ರ್‍ಯಾಲಿ

**ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ನೇತೃತ್ವದಲ್ಲಿ ಜಾಥ**



■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2024ರ ಅಂಗವಾಗಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರ ನೇತೃತ್ವದಲ್ಲಿ ಗುರುವಾರ ಬೈಕ್ ರ್‍ಯಾಲಿ ಮೂಲಕ ಉತ್ಸವದ ವಿಶೇಷ ಜಾಗೃತಿ ಕಾರ್ಯಕ್ರಮ ನಡೆಯಿತು. ಹೊಸಪೇಟೆಯಿಂದ ಹಂಪಿವರೆಗೆ ಹಮ್ಮಿಕೊಂಡ ಈ ಬೈಕ್ ರ್‍ಯಾಲಿಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಚಾಲನೆ ನೀಡಲಾಯಿತು. ಅಲ್ಲಿಂದ ಬೈಕ್ ರ್‍ಯಾಲಿಯು ಸಾಯಿಬಾಬಾ ಸರ್ಕಲ್, ವಾಲ್ಮೀಕಿ ಸರ್ಕಲ್, ಮದಕರಿನಾಯಕ ವೃತ್ತ, ಅಂಬೇಡ್ಕರ್ ಸರ್ಕಲ್, ಪುನಿತ್ ರಾಜಕುಮಾರ ಸರ್ಕಲ್, ಕೇಂದ್ರೀಯ ಬಸ್ ನಿಲ್ದಾಣದ ಮುಂಭಾಗದಿಂದ ಪುಣ್ಯಮೂರ್ತಿ ಸರ್ಕಲ್ ಮಾರ್ಗವಾಗಿ ಹಂಪಿ ರಸ್ತೆಯ ಮೂಲಕ ಹಂಪಿವರೆಗೆ ಸಾಗಿ ಸಾರ್ವಜನಿಕರ ಗಮನ ಸೆಳೆಯುವುದಲ್ಲದೇ ಹಂಪಿ ಉತ್ಸವಕ್ಕೆ ವಿಶೇಷ ಜಾಗೃತಿ ಮೂಡಿಸಿತು. ರ್‍ಯಾಲಿಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗ ಸದಾಶಿವ ಪ್ರಭು ಬಿ., ಯುವ ಮುಖಂಡ ಎಚ್.ಜಿ.ವಿರೂಪಾಕ್ಷ ಸೇರಿದಂತೆ ಹಲವು ಗಣ್ಯರು, ಶಿಕ್ಷಕರು, ವಿವಿಧ ಸಂಘ ಸಂಸ್ಥೆಗಳ ಮುಖಂಡರು, ಅಧಿಕಾರಿಗಳು ಪಾಲ್ಗೊಂಡಿದ್ದರು.

## ಮದ್ಯ ಮಾರಾಟ ನಿಷೇಧಾಜ್ಞಾ ಜಾರಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2024ರ ಹಿನ್ನಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಹಂಪಿ ಮತ್ತು ಕಮಲಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಆದೇಶ ಹೊರಡಿಸಿದ್ದಾರೆ.ಫೆ.2ರಂದು ಬೆಳಿಗ್ಗೆ 6 ಗಂಟೆಯಿಂದ ಫೆ.5ರ ಬೆಳಿಗ್ಗೆ 6 ಗಂಟೆಯವರೆಗೆ ಹಂಪಿ ಮತ್ತು ಕಮಲಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮದ್ಯದಂಗಡಿಗಳಲ್ಲಿ ಮದ್ಯ ಮಾರಾಟ ಮಾಡದಂತೆ ಹಾಗೂ ಮದ್ಯದಂಗಡಿಗಳನ್ನು ಮುಚ್ಚುವಂತೆ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಿದೆ. ಈ ಆದೇಶವನ್ನು ಅನುಷ್ಠಾನಕ್ಕೆ ತರಲು ವಿಜಯನಗರ ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ಅಬಕಾರಿ ಇಲಾಖೆಯ ಅಬಕಾರಿ ಉಪ ಆಯುಕ್ತರು ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.




# ಸಾಂಸ್ಕೃತಿಕ ರಾಜಧಾನಿ ವಿಜಯನಗರ (ಹಂಪೆ)

ಎಲ್ಲಾ ರಸ್ತೆಗಳು ರೋಮ್ ನಗರದತ್ತ ಎಂಬ ಮಾತುಗಳು ಹಿಂದೆ ಹೆಚ್ಚು ಜನಬಳಕೆಯಲ್ಲಿತ್ತು. ಆದರೆ ಕಾಲ ಕ್ರಮೇಣ ವಿಜಯನಗರದ ಇತಿಹಾಸ ಅನಾವರಣಗೊಳ್ಳುತ್ತಿದಂತೆ ಈ ವಾಕ್ಯ ಬದಲಾಗಿ ಎಲ್ಲ ರಸ್ತೆಗಳು ವಿಜಯನಗರದತ್ತ (ಹಂಪೆ) ಎಂಬುದು ಪ್ರಚಲಿತಕ್ಕೆ ಬಂದಿತು. 13ನೇ ಶತಮಾನದಿಂದ 16ನೇ ಶತಮಾನದವರೆಗಿನ ಅವಧಿ ಕರ್ನಾಟಕದ ಇತಿಹಾಸದಲ್ಲಿ ಸುವರ್ಣ ಯುಗ. ಮರೆಯಲಾಗದ ಮಹಾ ಸಾಮಾಜ್ರ್ಯ ವಿಜಯನಗರದ ಅಧಿಪತ್ಯದ ಕಾಲವದು. ದಕ್ಷಿಣಭಾರತದ ಪ್ರಖ್ಯಾತ ಆ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಕೀರ್ತಿ ಹಂಪಿಯದು. ಅದರ ಒಳಗಿದ್ದ ಎಲ್ಲಾ ಅಂಶಗಳು 19ನೇ ಶತಮಾನದಲ್ಲಿ ಬೆಳಕಿಗೆ ಬರುತ್ತಿದ್ದಂತೆ ವಿಶ್ವವನ್ನೇ ಹಂಪೆ ಸೂಜಿಗಲ್ಲಿನಂತೆ ತನ್ನತ್ತ ಸೆಳೆದಿದ್ದು ನಮ್ಮ ಮನಗಳಲ್ಲಿ ಇನ್ನೂ ಹಸಿರಾಗಿದೆ.

ಹಂಪೆ ಎಂದ ತಕ್ಷಣ ನಮ್ಮ ಮನ ಒಂದು ಕ್ಷಣ ಉಲ್ಲಸಿತವಾಗುತ್ತದೆ. ಯಾವುದೋ ಒಂದು ಆಕರ್ಷಣೆ ನಮ್ಮನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಆ ತಕ್ಷಣ ನಮ್ಮ ಸ್ಮೃತಿ ಪಟಲದಲ್ಲಿ ವಿರುಪಾಕ್ಷಗೋಪುರ, ಕಲ್ಲಿನತೇರು, ಮಹಾನವಮಿದಿಬ್ಬ, ರಾಣಿಯರ ಸ್ನಾನಗೃಹ, ಲೋಟಸ್‌ಮಹಲ್, ಆನೆಲಾಯ, ಹಜರರಾಮ ದೇವಸ್ಥಾನ, ಉಗ್ರನರಸಿಂಹ, ಬಡವಿಲಿಂಗ, ಸಂಗೀತ ಕಂಬಗಳು, ಬೃಹದಾಕಾರದ ಕಲ್ಲುಗಳು, ತಿರು ತಿರುಗಿ ಹರಿಯುವ ತುಂಗಭದ್ರೆ, ವಿದೇಶಿ ಪ್ರವಾಸಿಗರು....... ಹೀಗೆ ನಾನಾ ಚಿತ್ರಗಳು ಹಾದು ಹೋಗುತ್ತವೆ. ಆ ವೈಭವ ನೆನೆದರೆ ಸಾಕು ಮೈ ಮನಗಳು ರೋಮಾಂಚನಗೊಳ್ಳುತ್ತವೆ. ಕರ್ನಾಟಕದ ಮಧ್ಯಭಾಗದ ಹಂಪೆ ನಿಜವಾದ ಅರ್ಥದಲ್ಲಿ ದಕ್ಷಿಣ ಭಾರತದ ಸಾಂಸ್ಕೃತಿಕ ರಾಜಧಾನಿಯಾಗುವ ಎಲ್ಲ ಗುಣವಿಶೇಶಗಳನ್ನು ಗಳಿಸಿಕೊಳ್ಳುತ್ತಿದೆ.

ಪ್ರಪಂಚದ ನಾಲ್ಕು ಮಹಾಸಾಮ್ರಾಜ್ಯಗಳಲ್ಲಿ ಒಂದೆಂದು ಖ್ಯಾತಿ ಪಡೆದಿರುವ ವಿಜಯನಗರ ಕುರಿತು ಪರ್ಷಿಯದಿಂದ ಬಂದ ರಾಯಭಾರಿಯಾದ ಅಬ್ದುಲ್ ರಜಾಕ್, ಇಟಲಿಯಿಂದ ಬಂದ ನಿಕೊಲೊ ಡಿ ಕೊಂಟೆ, ಪೋರ್ಚುಗೀಸರಾದ ಬಾರ್ಬೋಸ ಮತ್ತು ಡೊಮಿಂಗೊ ಪೇಯಿಸ್‌ರವರೆಲ್ಲರೂ ಪೈಪೋಟಿಗಿಳಿದವರಂತೆ ಅಂದಿನ ವೈಭವವನ್ನು ವರ್ಣಿಸಿದ್ದಾರೆ.

ಸರ್ವಾಂಗ ಸುಂದರಿ, ಸಮೃದ್ಧ ರಾಜಧಾನಿ, ವರ್ಣಿಸಲಸಾಧ್ಯವಾದ ಅಂದಿನ ವಿಜಯನಗರವನ್ನು–ಪರ್ಷಿಯಾದ ಅಬ್ದುಲ್ ರಜಾಕ್ ತನ್ನ ಪ್ರವಾಸಕಥನ ಮತ್ಲ ಅಸ್ ಸದೈನ್‌ದಲ್ಲಿ "ಬಿಜನಗರ ಬಹಳ ದೊಡ್ಡ ಜನಸಂಖ್ಯೆಯ ಊರು. ರಾಜ್ಯ ಸೆರೆನ್ ದಿಬ್‌ದ (ಸಿಂಹಳ) ಗಡಿಯಿಂದ ಕಲ್ಬರ್ಗದ ಕೊಟ್ಟಕೊನೆಯವರೆಗೆ, ಬಂಗಾಲದಿಂದ ಮಲಬಾರ್ ಕೊನೆಯವರೆಗೆ ಸಾವಿರ ಫರೆಲಾಂಗ್‌ಗಳಷ್ಟು ವಿಸ್ತರಿಸಿದೆ. ಮುನ್ನೂರು ಬಂದರುಗಳಿವೆ. ಸೈನ್ಯದಲ್ಲಿ 11ಲಕ್ಷ ಯೋಧರಿದ್ದಾರೆ. ಸಾವಿರಕ್ಕೂ ಹೆಚ್ಚಿನ ಪೆಡಂಭೂತಗಳಂತಹ ಆನೆಗಳಿವೆ. ಈ ರಾಯನಂತಹ ಶ್ರೇಷ್ಠ ದೊರೆ ಹಿಂದುಸ್ಥಾನದಲ್ಲಿ ಎಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಈ ನಗರವನ್ನು ಏಳು ದುರ್ಗಗಳೂ ಏಳುಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿವೆ. ಅಂಗಡಿಬೀದಿಗಳು ಬಹು ಉದ್ದ ವಾಗಿಯೂ ಅಗಲವಾಗಿಯೂ ಇವೆ. ಬೀದಿಗಳಲ್ಲೆಲ್ಲ ಗುಲಾಬಿ ಹೂವಿನ ವಾಸನೆ. ಈ ಜನಗಳು ಗುಲಾಬಿ ಹೂಗಳಿಲ್ಲದೆ ಬದುಕುವಂತೆಯೇ ಇಲ್ಲ. ರತ್ನಪಡಿ ವ್ಯಾಪಾರಿಗಳು ಅಂಗಡಿಬೀದಿಗಳಲ್ಲಿ ಬಹಿರಂಗವಾಗಿ ವಜ್ರವೈಡೂರ್ಯಗಳನ್ನೂ ಮುತ್ತುಗಳನ್ನೂ ಮಾರುತ್ತಾರೆ. ಇಂತಹ ನಗರವನ್ನು ಕಣ್ಣಿಂದ ಕಂಡಿಲ್ಲ,ಕಿವಿಯಿಂದ ಕೇಳಿಲ್ಲ" ಎಂದು ವರ್ಣಿಸಿದ್ದಾನೆ. ಅಂತಹ ಕಣ್ಣು ಕೋರೈಸುವ ಸಾಮ್ರಾಜ್ಯದ ಸಾಂಸ್ಕೃತಿಕತೆಯ ವೈಭವವನ್ನು ಮತ್ತೆ ನೆನಪಿಸುವ ಹಬ್ಬವೇ ಹಂಪಿ ಉತ್ಸವ.

ವಿಜಯನಗರದ ವೈಭವದ ಕಾಲಕ್ಕೆ ಭೇಟಿ ನೀಡಿದ್ದ ಮತ್ತೊಬ್ಬ ಪ್ರವಾಸಿಗ ಪೋರ್ಚಗೀಸ್‌ನ ಡೊಮಿಂಗೋಸ್‌ಪಿಯಾಸ್‌ನು "ಭೂಮಿಯ ಮೇಲೆ ಇರುವುದೆಲ್ಲಾ ಈ ನಗರದಲ್ಲಿದೆ" ಎಂದು ಹಂಪೆಯನ್ನ ಹೊಗಳಿದ್ದಾನೆ. ಅದಕ್ಕೆ ಕಾರಣಗಳನ್ನೂ ಅವನು ನೀಡಿದ್ದಾನೆ. ಆ ಪ್ರದೇಶದಲ್ಲಿನ ವೈಭವೋಪಿತ ಸ್ಥಳಗಳು, ವಿಶಾಲವಾದ ಕಟ್ಟಡಗಳು, ಮಾರುಕಟ್ಟೆ, ಹೊರಾಂಗಣಗಳು, ಸುಂದರ ಕೆತ್ತನೆ ಕಂಬಗಳು, ವ್ಯಾಪಾರಿಗಳಿಗೆ ಇಲ್ಲಿ ಸ್ವರ್ಗವೇ ಸಿಕ್ಕಂತಾಗಿತ್ತು. ವಜ್ರ, ವೈಡೂರ್ಯ, ಮುತ್ತು, ಹವಳ, ಪಚ್ಚೆ, ರೇಷ್ಮೆ, ಮುಂತಾದವುಗಳನ್ನು ಬೀದಿಯಲ್ಲಿ ಅಳೆದು ಮಾರುತ್ತಿರುವುದನ್ನು ಕಂಡು ಅವನು ನುಡಿದಿದ್ದಾನೆ.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ವೈಭವದಿಂದ ಮೆರೆದ ಹಂಪೆಯಲ್ಲಿನ ಪ್ರತಿಯೊಂದು ಕಲ್ಲು, ಕಲ್ಲುಗಳೂ ಕೂಡ ಹಿಂದಿನ ಗತವೈಭವವನ್ನು ಸಾರಿ ಹೇಳುತ್ತವೆ. ಗುರು ವಿದ್ಯಾರಣ್ಯರ ನಿರ್ದೇಶನದ ಮೇರೆಗೆ ಹರಿಹರ ಮತ್ತು ಬುಕ್ಕ ಕ್ರಿ.ಶ.1336ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದರು. 1336ರಿಂದ 1565ರವರೆಗೆ ಇದು ವಿಜಯನಗರ ಸಾಮ್ರಾಜ್ಯದ ರಾಜಧಾನಿ ಆಗಿತ್ತು. ಹಂಪೆಯ ಮೊದಲನೆ ಹೆಸರು 'ಪಂಪ' ಎಂದಿತ್ತು, ಅಂದರೆ ತುಂಗಭದ್ರ ನದಿ ಎಂದರ್ಥ. ವರ್ಷಗಳು ಕಳೆದಂತೆ ಇದು 'ವಿಜಯನಗರ' ಮತ್ತು 'ವಿರುಪಾಕ್ಷಪುರ' ಎಂದು ಕರೆಯಲ್ಪಟ್ಟಿತು. ವಿಜಯನಗರ ಸಾಮ್ರಾಜ್ಯದ ಅತೀ ಯಶಸ್ವಿ ಒಡೆಯನಾದ ಕೃಷ್ಣದೇವರಾಯನ ಕಾಲದಲ್ಲಿ ಹಂಪೆ ಬಜಾರ್ ಎಂದೆನ್ನಿಸಿ ಕೊಂಡ ಬೀದಿಯಲ್ಲಿ ವಜ್ರಾಭರಣಗಳನ್ನು ತೂಕದ ಮಾದರಿಯಲ್ಲಿ ಮಾರಲ್ಪಡುತ್ತಿದ್ದರಂತೆ. ಕೃಷ್ಣದೇವರಾಯನ ರಾಜ್ಯಭಾರ ಮುಗಿದ ನಂತರ ವಿಜಯನಗರ ಸಾಮ್ರಾಜ್ಯ ತನ್ನ ಪ್ರಾಬಲ್ಯವನ್ನು ನಿಧಾನವಾಗಿ ಕಳೆದು ಕೊಳ್ಳುತ್ತಾ ಬಂತು. ಕೊನೆಗೆ ತಾಳೀಕೋಟೆಯ ಯುದ್ಧದಲ್ಲಿ ಮುಸ್ಲಿಂ ಸಾಮ್ರಾಜ್ಯದಿಂದ ಬಂದ ಆಕ್ರಮಣವನ್ನು ತಡೆಯದೆ ಅಂತ್ಯಗೊಂಡಿತು. ಹಂಪೆಯಲ್ಲಿದ್ದ ಅನೇಕ ಸ್ಮಾರಕಗಳು ನಾಶವಾದವು.

ವಿರೂಪಾಕ್ಷ ದೇವಾಲಯ, ಹಜಾರ ರಾಮ ದೇವಸ್ಥಾನ, ಸಪ್ತಸ್ವರ ಸಂಗೀತ ಹೊರಹೊಮ್ಮಿಸುವ ಕಲ್ಲಿನ ಕಂಭಗಳು, ವಿಶ್ವವಿಖ್ಯಾತ ಕಲ್ಲಿನ ರಥ, ಮಹಾನವಮಿ ದಿಬ್ಬ, ಸಾಸಿವೆ ಕಾಳು ಗಣಪತಿ, ಕಡಲೆ ಕಾಳು ಗಣಪತಿ, ಉಗ್ರ ನರಸಿಂಹ, ಕಮಲ ಮಹಲ್, ಬಡವಿ ಲಿಂಗ, ಅನೆ ಲಾಯ, ಅಚ್ಯುತರಾಯ ದೇಗುಲ, ಅಕ್ಕ–ತಂಗಿ ಗುಡ್ಡ, ಆನೆಗೊಂದಿ, ಅಂಜನಾದ್ರಿ ಪರ್ವತ, ತುಂಗಭದ್ರ ನದಿ, ಪುರಂದರ ಮಂಟಪ, ವಿಜಯವಿಠ್ಠಲ ದೇಗುಲ, ರಾಣಿ ಸ್ನಾನ ಗೃಹ, ಹಂಪೆ ಬಜಾರ್, ಹೇಮಕೂಟ ಹೀಗೆ ಹಲವಾರು ಪ್ರೇಕ್ಷಣಿಯ ಸ್ಥಳಗಳನ್ನು ಹಂಪಿಯಲ್ಲಿ ನೋಡಬಹುದಾಗಿದೆ.

ಅತ್ಯಂತ ಸುಂದರವಾದ ವಾಸ್ತುಶಿಲ್ಪವುಳ್ಳ, ವಿಜಯ ನಗರದ ಮನಮೋಹಕವಾದ,ಆದರೆ ಇಂದು ಅವಶೇಷಗಳ ಮಧ್ಯ ಸಿಲುಕಿರುವ ನಗರ ಎನಿಸುವದು ಸಹಜ ಹಾಗು ಅಷ್ಟೇ ಸತ್ಯ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದು,ಹೊಯ್ಸಳರ ಸಾಂಪ್ರದಾಯಿಕ ಶೈಲಿಯ ವಾಸ್ತುಶೀಲ್ಪವನ್ನು ವೈಭವತೆಯಿಂದ ಪ್ರದರ್ಶಿಸಿದ ವಿಜಯನಗರ ಅಥವಾ ಹಂಪಿಯು ಇಂದು ಕೇವಲ ಕಲ್ಲಿನಲ್ಲಿ ಮುಚ್ಚಿಹೊದ ಒಂದು ಅದ್ಭುತ. ಯುನೆಸ್ಕೊ ಹಂಪೆಯನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಿ ಅದರ ಗೌರವವನ್ನು ಮತ್ತಷ್ಟು ಹೆಚ್ಚಿಸಿದೆ. ಹಂಪೆ ಇಂದು ವಿಶ್ವವಿಖ್ಯಾತ ಪ್ರವಾಸಿ ತಾಣ ಎಂಬ ಹೆಗ್ಗಳಿಕೆ ಪಾತ್ರವಾಗಿದೆ. ಸುಮಾರು 26 ಚದರ ಕಿ.ಮೀ.ವಿಸ್ತಾರಕ್ಕೆ ವಿಸ್ತರಿಸಿಕೊಂಡಿರುವ ಹಂಪೆಯ ಅವಶೇಷಗಳನ್ನು ವೀಕ್ಷಿಸಲು ಎರಡು ಕಣ್ಣುಗಳು ಸಾಲದಾಗುತ್ತವೆ. ಅವುಗಳಲ್ಲಿ ಬಹಳ ಮುಖ್ಯವಾದವನ್ನು ಗಮನಿಸುವುದಾದರೆ. . . .





**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
ಶಿಕ್ಷಕರು
soppi.mata@gmail.com

**ವಿರೂಪಾಕ್ಷ ದೇವಾಲಯ:**
ವಿರೂಪಾಕ್ಷ ದೇವಾಲಯವು ಶಿವ ಹಾಗು ಅವನ ಸಂಗಾತಿ ದೇವತೆಯಾದ ಪಂಪಾಳಿಗೆ ಸಮರ್ಪಿತವಾಗಿದ್ದು, ಹಂಪಿಗೆ ಬರುವ ಪ್ರವಾಸಿಗರು ಇದಕ್ಕೆ ಭೇಟಿ ನೀಡಬಹುದು. 50 ಮೀ. ಎತ್ತರದ ಗೋಪುರವನ್ನು ಹೊಂದಿರುವ ಈ ದೇವಾಲಯವು ತುಂಗಭದ್ರ ನದಿಯ ದಕ್ಷಿಣ ದಡದಲ್ಲಿರುವ ಹೇಮಕೂಟ ಬೆಟ್ಟದ ಕೆಳಭಾಗದಲ್ಲಿದೆ. ದಕ್ಷಿಣ ಭಾರತದ ದ್ರಾವಿಡಿಯನ್ ಮಾದರಿಯ ವಾಸ್ತುಶಿಲ್ಪವನ್ನು ಹೊಂದಿದೆ. ಪಂಪಾಪತಿ ದೇವಾಲಯವೆಂದೂ, ಕರೆಯಲ್ಪಡುವ ಈ ದೇವಾಲಯವು ಮುಖ ಮಂಟಪ(ರಂಗ ಮಂಟಪ), ಮುರು ಭಾಗಗಳು ಮತ್ತು ಖಂಬಗಳುಳ್ಳ ವಿಶಾಲವಾದ ಕೊಠಡಿಯನ್ನು ಹೊಂದಿದೆ.

ವಿರೂಪಾಕ್ಷ ವಿಜಯನಗರ ಅರಸರ ಕುಲದೈವ. ಮೂಲಗುಡಿ ಹೊಯ್ಸಳ ಬಲ್ಲಾಳನ ಕಾಲದಲ್ಲಿ 11ನೇ ಶತಮಾನದಲ್ಲಿ ರಚನೆಯಾಯಿತು. 16ನೇ ಶತಮಾನದ ವೇಳೆಗೆ ಇದಕ್ಕೆ ಅನೇಕ ಭಾಗಗಳು ಸೇರ್ಪಡೆಯಾದವು. 1510 ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಜೀರ್ಣೋದ್ಧಾರ ವಾಯಿತು .ವಿರುಪಾಕ್ಷ ದೇವಾಲಯಕ್ಕೆ ಮೂರು ಗೋಪುರಗಳಿವೆ. ಪಾತಾಳೇಶ್ವರ, ಮುಕ್ತಿ ನರಸಿಂಹ, ಸೂರ್ಯನಾರಾಯಣ ಗುಡಿಗಳಿವೆ, ಲಕ್ಷ್ಮಿನರಸಿಂಹ, ಮಹಿಷಾಸುರ ಮರ್ಧಿನಿ, ಶ್ರೀ ವೆಂಕಟೇಶ್ವರ ದೇವಾಲಯಗಳಿವೆ. ವಿರೂಪಾಕ್ಷ ದೇವಾಲಯದ ಮುಂಭಾಗ 732 ಮೀ.ಉದ್ದ ಹಾಗೂ 28ಮೀ.ಅಗಲದ ಹಂಪೆ ಬಜಾರ್ ಇದೆ. ಇದು ವಿಜಯನಗರದ ಅತಿ ದೊಡ್ಡ ಬಜಾರ್. ಇಲ್ಲಿ ಮುತ್ತು ರತ್ನ ವಜ್ರವೈಢೂರ್ಯಗಳನ್ನು ಮಾರಾಟ ಮಾಡಲಾಗುತ್ತಿತ್ತು. ಈಗಲೂ ಇಲ್ಲಿ ಅಂಗಡಿ ಸಾಲುಗಳಿವೆ. ಹಂಪೆ ಬಜಾರ್‌ನ ಪೂರ್ವ ತುದಿಯಲ್ಲಿ ವಿರೂಪಾಕ್ಷ ಗುಡಿಯ ಕಡೆಗೆ ಮುಖಮಾಡಿ ಮಲಗಿರುವ ಬೃಹತ್ ನಂದಿ ವಿಗ್ರಹ ಇದೆ.



**ಸಾಸುವೆಕಾಳು ಗಣೇಶ:**
ಹೇಮಕೂಟ ಬೆಟ್ಟದ ಕೆಳಗಿರುವ ಸಾಸಿವೆಕಾಳು ಗಣೇಶ ಗುಡಿಗೆ ಭೇಟಿ ನೀಡಲೇ ಬೇಕು. ಸಾಸಿವೆ ಕಾಳುಗಳನ್ನು ನೆನಪಿಗೆ ತರುವಂತಹ, ಇಲ್ಲಿರುವ ಜನಪ್ರೀಯ ಗಣಪತಿ ವಿಗ್ರಹವು 8 ಅಡಿ ಉದ್ದವಾಗಿದೆ. ಆದ್ದರಿಂದ ಭಕ್ತಸಮೂಹದಲ್ಲಿ, ಇದು ಸಾಸಿವೆಕಾಳು ಗಣೇಶನೆಂಬ ಹೆಸರಿನಿಂದಲೂ ಚಿರಪರಿಚಿತವಾಗಿದೆ. ವಿಗ್ರಹವು ಒಂದೆ ಕಲ್ಲಿನಲ್ಲಿ ಕೆತ್ತಲ್ಪಟ್ಟಿದ್ದು, ಬಲಗೈಯಲ್ಲಿ ಮುರಿದ ಆನೆಯ ದಂತ ಮತ್ತು ಅಂಕುಶವನ್ನು ಕಾಣಬಹುದು.ಮೊದಲನೆ ಎಡಗೈ ವಂಕಿ ಯಾಕರದ ಪಾಶವನ್ನು ಹೊಂದಿದ್ದು, ಎರಡನೆ ಎಡ ಗೈಯ ಮತ್ತು ಸೊಂಡಿಲು ಕಲ್ಲಿ ನಿಂದ ಬೇರ್ಪಡಿಸಿ ಕೆತ್ತಲಾಗಿದೆ. ಇದನ್ನು ಚಂದ್ರಗಿರಿಯ ವ್ಯಾಪರಿ ಯೊಬ್ಬನು ಕ್ರಿ.ಶ.1506 ರಲ್ಲೆ ವಿಜಯನಗರ ಸಾಮ್ರಾಜ್ಯದ ದೊರೆಯಾದ ನರಸಿಂಹ 2 ನಿ ಗೋಸ್ಕರ ಕಟ್ಟಿದನೆಂಬದು ತಿಳಿದು ಬರುತ್ತದೆ.

**ಕಡ್ಲೇಕಾಳು ಗಣೇಶ :**
ಈ ಮೂರ್ತಿಯು ಏಕಶಿಲೆಯಿಂದ ನಿರ್ಮಿತವಾಗಿದೆ. ಸುಮಾರು 18 ಅಡಿ ಎತ್ತರವಿದೆ.

**ಸಾಸಿವೆಕಾಳು ಗಣೇಶ :**
ಈ ಮೂರ್ತಿಯು ಸುಮಾರು 12 ಅಡಿ ಎತ್ತರವಿದೆ. ಇದರ ಪಕ್ಕದಲ್ಲಿ ಒಂದು ಶಿಲಾಶಾಸನವಿದೆ ಹಾಗೂ ಧಾನ್ಯ ಮಳಿಗೆಗಳು ಕಂಡುಬರುತ್ತವೆ.

**ಉಗ್ರನರಸಿಂಹ:–** ಶ್ರೀ ಲಕ್ಷ್ಮಿನರಸಿಂಹ ಗುಡಿಯಲ್ಲಿ, 6.7ಮೀ. ಎತ್ತರವಿರುವ ಒಂದೆ ಕಲ್ಲಿನಲ್ಲಿ ಕೆತ್ತಲಾದ, ನರಸಿಂಹನ(ಭಗವಾನ ವಿಷ್ಣುವಿನ ಅವತಾರ) ವಿಗ್ರಹವು ಆದಿಶೇಷನ(ಏಳು ಹೆಡೆಯ ಸರ್ಪ) ಮೇಲೆ ವಿಶ್ರಮಿಸುವ ಭಂಗಿಯಲ್ಲಿದ್ದು, ಇಲ್ಲಿಗೆ ಬರುವ ಪ್ರವಾಸಿಗರಲ್ಲಿ ಹೆಸರುವಾಸಿಯಾಗಿದೆ. ಇಲ್ಲಿ ಕೆತ್ತಲಾಗಿರುವ ಮಾಹಿತಿಯ ಪ್ರಕಾರ, ಇದನ್ನು, ಕ್ರಿ.ಶ.1528ರಲ್ಲಿ ದೊರೆಯಾದ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಪೂರ್ಣಗೊಳಿಸಲಾಯಿತೆಂದು ತಿಳಿದು ಬರುತ್ತದೆ. ಮೂಲ ವಿಗ್ರಹವು ಲಕ್ಷ್ಮಿ ದೇವತೆಯು ವಿಷ್ಣುವಿನ ತೊಡೆಯಲ್ಲಿ ಕುಳಿತಿರುವ ಭಂಗಿಯಲ್ಲಿದೆ. ಆದರೆ, ಕ್ರಿ.ಶ.1565ರಲ್ಲಿ, ಲಕ್ಷ್ಮಿ ದೇವತೆಯ ವಿಗ್ರಹವು ನಾಶ ಹೊಂದಿದ್ದು, ಪ್ರಸ್ತುತ ಅದನ್ನು ಕಮಲಾಪುರ ಸಂಗ್ರಹಾಲಯದಲ್ಲಿ ಇರಿಸಲಾಗಿದೆ.

> ವಿಜಯನಗರದ ಹಂಪಿ ಬರೀ ಉತ್ಸವಕ್ಕೆ ಸೀಮಿತವಾಗಬಾರಾದು. ಅದರಾಚೆಗೆ ವರ್ಷಪೂರ್ತಿ ವಿಶ್ವದೆಲ್ಲಡೆಯಿಂದ ಪ್ರವಾಸಿಗರನ್ನು ತನ್ನತ್ತ ಸೆಳೆಯುವಂತಾಗಬೇಕು. ಅದರಿಂದ ಈ ಭಾಗದ ಪ್ರವಾಸೋದ್ಯಮ, ಹೋಟೆಲ್ ಇತ್ಯಾದಿಗಳೆಲ್ಲವುಗಳ ಮೌಲ್ಯ ಹೆಚ್ಚಾಗುತ್ತದೆ. ಇಲ್ಲಿನ ಜನರ ಬದುಕೂ ಹಸನಾಗುತ್ತದೆ. ಆ ನಿಟ್ಟಿನತ್ತ ನಮ್ಮ ಸರಕಾರಗಳು, ಪ್ರವಾಸೋದ್ಯಮಗಳು, ಸ್ಥಳೀಯ ಆಡಳಿತಗಳು ತಮ್ಮನ್ನು ಹೆಚ್ಚು ತೊಡಗಿಸಿಕೊಳ್ಳಬೇಕು.
> ಇತ್ತೀಚಿನ ಹಂಪೆಯನ್ನು ಗಮನಿಸಿದರೆ ಕೆಲವೇ ಕೆಲವು ಜನರ ಸ್ವಾರ್ಥಕ್ಕಾಗಿ ಅದು ಪೂರ್ಣ ವಿದೇಶಿ ಮಾರುಕಟ್ಟೆಯಾಗಿ ಪರಿವರ್ತನೆಯಾಗಿದೆ. ಅಲ್ಲದೆ ಮಾದಕ ಪೇಯಗಳ ಮಾರಾಟ, ಅಕ್ರಮ–ಅನೈತಿಕ ವ್ಯವಹಾರಗಳಿಂದಾಗಿ ಹಂಪಿ ಪವಿತ್ರತೆಗೆ ಧಕ್ಕೆ ಬರುತ್ತಿದೆ! ಹರುಕು ಮುರುಕು ಇಂಗ್ಲಿಷ್‌ನಲ್ಲಿ ಮಾತನಾಡಿ ತಮ್ಮ ವ್ಯಾಪಾರ ಕುದುರಿಸುವವರು ವಿದೇಶಿಯರಿಗೆ ಬೇಕಾದುದುನ್ನೆಲ್ಲಾ ಪೊರೈಸುತ್ತಾರೆ. ಅವರಿಂದ ಹೆಚ್ಚು ಹಣ ಕೀಳಬಹುದೆಂಬ ದುರಾಸೆ ಅವರಲ್ಲಿ ಮನೆ ಮಾಡಿದೆ. ಹಾಗಾಗಿ ನಾವೇ ಇಂದು ಅಲ್ಲಿ ಪರಕೀಯರು ಎಂಬಂತೆ ಭಾಸವಾಗುತ್ತದೆ. ಚಿಕ್ಕ ವಸ್ತುವಿನ ಬೆಲೆ ಕೂಡ ಗಗನಕ್ಕೇರಿ ಹಂಪೆ ಸಹವಾಸ ಈ ಜನ್ಮದಲ್ಲಿ ಸಾಕು ಎಂಬಂತೆ ಬೆಚ್ಚಿ ಬೀಳುತ್ತೇವೆ. ಈ ಅಂಶದ ಕಡೆಗೆ ಸಂಬಂಧಪಟ್ಟವರು ಗಮನ ಹರಿಸಿ ಇದನ್ನೆಲ್ಲಾ ಸರಿಪಡಿಸಿದಲ್ಲಿ ಹಂಪೆಯ ಕಿರೀಟಕ್ಕೆ ಮತ್ತೊಂದು ಗರಿ ಸೇರಿದಂತಾಗುತ್ತದೆ. ಆ ನಿಟ್ಟಿನಲ್ಲಿ ನಮ್ಮೆಲ್ಲರ ಪ್ರಯತ್ನಗಳು ಸಾಗಲಿ ಎಂಬುದೇ ಎಲ್ಲರ ಮನದಾಳದ ಆಸೆ.

**ಕೃಷ್ಣ ದೇವಸ್ಥಾನ:**
ಶ್ರೀಕೃಷ್ಣದೇವರಾಯನು ಈ ದೇವಸ್ಥಾನವನ್ನು ಕಟ್ಟಿಸಿದ ನೆಂದು 1523 ರಲ್ಲಿ ಬಾಲಕ್ರಿಷ್ಣನ ವಿಗ್ರಹವನ್ನು ಉದಯಗಿರಿಯಿಂದ ತರಿಸಿ ಪ್ರತಿಷ್ಠಾಪಿಸಿದನು. ಆದರೆ ಈಗ ಆ ಮೂರ್ತಿಯು ಮದ್ರಾ ಸಿನ ವಸ್ತು ಸಂಗ್ರಹಾಲಯದಲ್ಲಿ ಇದೆ. ಹಾಗೂ ಇದರ ಎದುಗಡೆ ಮಾರುಕಟ್ಟೆಯ ಬೀದಿಯಿದೆ.. ಇಲ್ಲಿ ದವಸ ಧಾನ್ಯಗಳನ್ನು ಮಾರುತ್ತಿ ದ್ದರೆಂದು ತಿಳಿದು ಬಂದಿದೆ ಹಾಗೂ ಸುಂದರವಾದ ಪುಷ್ಕರಣಿಯಿದೆ.



**ಹಜಾರರಾಮ ದೇವಸ್ಥಾನ :**
ಈ ದೇವಾಲಯವು ಕೇವಲ ರಾಜರಿಗೆ ಮಾತ್ರ ಪ್ರವೇಶವಾಗಿತ್ತು. ರಾಜನು ದೇವರ ದರ್ಶನ ಪಡೆದು ಪಕ್ಕದಲ್ಲಿರುವ ರಾಜಸಭಾ ಹಾಲ್ ದರ್ಬಾರಿಗೆ ಹೋಗುತ್ತಿದ್ದನೆಂದು ತಿಳಿದುಬಂದಿದೆ. ಇದು ಕೋಟೆಯೊಳಗೆ, ರಾಜನ ದರ್ಬಾರ್ ಸಭಾಂಗಣದಿಂದ ಉತ್ತರಕ್ಕಿದೆ. ಹಂಪೆಯಲ್ಲಿಅಳಿದುಳಿದಿರುವ ಐದು ಪ್ರಮುಖ ದೇವಾಲಯಗಳಲ್ಲೊಂದು. ದೇವಾಲಯದ ಗೋಡೆಗಳ ಮೇಲೆ ರಾಮಾಯಣ, ಮಹಾಭಾರತದ ದೃಶ್ಯಗಳು ಹಾಗೂ ವೈಷ್ಣವ ದೇವತೆಗಳ ಶಿಲ್ಪಗಳು ಕಂಡು ಬರುತ್ತವೆ.

**ಕೋದಂಡರಾಮ ದೇವಾಲಯ:**
ಹಂಪೆ ಬಜಾರ್‌ನ ಪೂರ್ವ ತುದಿಯ ಉತ್ತರಕ್ಕೆ ನೈಸರ್ಗಿಕ ಬಂಡೆಯಲ್ಲಿ ಕೆತ್ತಿಸಲಾದ ರಾಮ, ಸೀತೆ ಲಕ್ಷ್ಮಣರ 15 ಅಡಿ ಎತ್ತರದ ವಿಗ್ರಹಗಳು ವಿಸ್ಮಯವನ್ನುಂಟು ಮಾಡುತ್ತವೆ. ಕೋದಂಡರಾಮ ದೇವಾಲಯದ ಸಮೀಪದಲ್ಲೇ ಯಂತ್ರೋದ್ಧಾರಕ ಆಂಜನೇಯ ಗುಡಿ ಕೂಡ ಇದೆ.

**ವಿಜಯವಿಠಲ ದೇವಾಲಯ:**
ಹಂಪೆಯ ಅತ್ಯುತ್ತಮ ಕಟ್ಟಡಗಳಲ್ಲೊಂದು. ಪ್ರೌಢ ದೇವರಾಯನ ಕಾಲದಲ್ಲಿ ಪ್ರಾರಂಭಗೊಂಡ ಈ ದೇವಾಲಯದ ಕಾಮಗಾರಿ ಕೃಷ್ಣದೇವರಾಯ, ಅಚ್ಯುತರಾಯ ಮತ್ತು ಸದಾವಶಿವ ನಗರ ಕಾಲದಲ್ಲೂ ಮುಂದುವರಿಯಿತು. 1565ರಲ್ಲಿ ವಿಜಯನಗರ ಸಾಮ್ರಾಜ್ಯ ಪತನಗೊಂಡಿದ್ದರಿಂದ ದೇವಾಲಯದ ಕಾಮಗಾರಿ ಸ್ಥಗಿತಗೊಂಡು ಕೆಲವು ಭಾಗಗಳು ಅಪೂರ್ಣವಾಗಿ ಉಳಿದಿದೆ. ಶ್ರೀ ಕೃಷ್ಣದೇವರಾಯನು 1513 ರಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ದೇವಾಲಯದಲ್ಲಿ ಸಂಗೀತದ ಕಲ್ಲಿನ ಕಂಬಗಳಿವೆ. ಇವನ್ನು ಈಗಲೂ ಸಹ ನೋಡಬಹುದು ಹಾಗೂ ಸಂಗೀತವನ್ನು ಕೇಳಬಹುದು. ಈ ದೇವಾಲಯದ ಎದುರು ಭಾಗದಲ್ಲಿ ಕಲ್ಲಿನಿಂದ ಕೆತ್ತಿರುವ ಶಿಲಾ ರಥವಿದೆ, ಈ ದೇವಾಲಯದ ಪ್ರಾಂಗಣದಲ್ಲಿ ಕಲ್ಯಾಣ ಮಂಟಪ, ಸಭಾ ಮಂಟಪಗಳು ಇವೆ ಹಾಗೂ ಉತ್ತಮವಾದ ಕೆತ್ತನೆಗಳಿವೆ.

**ಜೆನಾನಾ ಎನ್ಕ್ಲೋಸರ್ (ರಾಣಿಯರ ಸ್ನಾನ ಗೃಹ):**
ಎತ್ತರನೆಯ ಕಲ್ಲಿನ ಗೋಡೆಗಳಿಂದ ಸುತ್ತುರೆಯಾಗಿ ನಿರ್ಮಿಸಲಾದ ಜೆನಾನಾ ಎನ್ಕ್ಲೋಸರ್, ಹಂಪಿಯಲ್ಲಿ ಪ್ರವಾಸಿಸುವಾಗ ನೋಡಲೆ ಬೇಕಾದ ಒಂದು ಸ್ಥಳ. ಇದರಲ್ಲಿ ನಾಲ್ಕು ಪ್ರಧಾನ ರಚನೆಗಳಿದ್ದು, ಅವುಗಳೇ ಮಹಾರಾಣಿ ಅರಮನೆ (ಕ್ವೀನ್ಸ್ ಪ್ಯಾಲೇಸ್), ಎರಡು ನಿರೀಕ್ಷಣಾ ಗೋಪುರಗಳು ಹಾಗು ಜನಪ್ರೀಯವಾದ ಲೊಟಸ್ ಮಹಲ್. ಈ ಕಟ್ಟಡಕ್ಕೆ ಅನೇಕ ಖಿಂಡಿಗಳಿದ್ದು, ರಾಣಿಯರ ಬೇಸಿಗೆ ಅರಮನೆಯಾಗಿತ್ತು. ಕ್ವೀನ್ಸ ಪ್ಯಾಲೇಸ್ 46*29 ಮೀ. ಅಳತೆ ಹೊಂದಿದ್ದು ಕಟ್ಟಿಗೆ ಹಾಗು ಇತರೆ ಸಾಮಗ್ರಿಗಳಿಂದ ನಿರ್ಮಿಸಲ್ಪಟ್ಟಿದೆ. ಇತಿಹಾಸಕಾರರ ಪ್ರಕಾರ, ಈ ಸ್ಥಳವು ಕೇವಲ ಮಹಿಳೆಯರಿಗಾಗಿ ಮಾತ್ರ ಮೀಸಲಾಗಿದ್ದುದರಿಂದ, ಇದರ ರಕ್ಷಣೆಯು ನಪುಂಸಕ ಸೈನಿಕರಿಂದ ಮಾಡಲ್ಪಡುತ್ತಿತ್ತು. ಉತ್ತರ ಹಾಗು ಆಗ್ನೇಯ ದಿಕ್ಕಿನಲ್ಲಿ ಕಟ್ಟಲಾದ ಎರಡು ಕಟ್ಟಡಗಳು ನಿರೀಕ್ಷಣಾ ಗೋಪುರಗಳಾಗಿ ನಿರ್ವಹಿಸಲ್ಪಡುತ್ತಿದ್ದವು. ಈ ಕಟ್ಟಡಗಳಿಂದ ಮಹಾರಾಣಿ ಹಾಗು ಆಕೆಯ ಕುಟುಂಬದ ಸದಸ್ಯರು ಹೊರಗೆ ನಡೆಯುತ್ತಿದ್ದ ಚಟುವಟಿಕೆಗಳನ್ನು ವಿಕ್ಷೀಸುತ್ತಿದ್ದರು. ಇಂಡೊ–ಇಸ್ಲಾಮಿಕ್ ಮಾದರಿಯ ವಾಸ್ತುಶಿಲ್ಪವುಳ್ಳ ಲೊಟಸ್ ಪ್ಯಾಲೇಸ್ ರಾಜ ಮಹಿಳೆಯರು ಸಂಧಿಸಿ ದಿನಕಳೆಯುವ ಸ್ಥಳವಾಗಿತ್ತು.

**ಮಹಾನವಮಿಯ ದಿಬ್ಬ :**
ಇದನ್ನು ದಸರಾ ದಿಬ್ಬ ಎಂದು ಕರೆಯುತ್ತಾರೆ. ಇದರ ಸುತ್ತಲೂ ಆಶ್ಚರ್ಯಕರ ರೀತಿಯಲ್ಲಿ ಉಬ್ಬು ಚಿತ್ರಗಳು ಕೆತ್ತಲ್ಪಟ್ಟಿವೆ ಹಾಗೂ ಇದು ರಾಜ ಪ್ರಾಂಗಣಕ್ಕೆ ಹೊಂದಿಕೊಂಡು ಇದರ ಹತ್ತಿರ ವಿಜಯನಗರ ಕಾಲದ ಕಲ್ಲಿನ ಕಾಲುವೆಗಳು, ನೀರಿನ ಕೊಳಗಳು, ವಿಶೇಷ ಕೊಳಗಳು ಹಾಗೂ ರಾಜನ ಅರಮನೆ, ಸೈನಿಕರ ಮನೆಗಳು ಹಾಗೂ ಕಲ್ಲಿನ ಬಾಗಿಲನ್ನು ನೋಡಬಹುದು.

**ಲೋಟಸ್ ಮಹಲ್:**
ದಸರಾ ದಿಬ್ಬದ ಉತ್ತರದ ಕಡೆಗೆ ಇದೆ. ಕಮಲ ಮಹಲ್, ಚಿತ್ರಾಂಗಿಣಿ ಮಹಲ್ ಎಂತೆಲ್ಲ ಕರೆಯುತ್ತಾರೆ. ಇದು ಹಿಂದೂ ಮುಸಲ್ಮಾನರ ಶೈಲಿಂದ ಅಚ್ಚುಗಾರೆಯಿಂದ ನಿರ್ಮಿಸಲ್ಪಟ್ಟಿದೆ. ಇದು 2 ಅಂತಸ್ತಿನಿಂದ ಕೂಡಿದೆ.ಎಂತಹ ಬೇಸಿಗೆಯಲ್ಲೂ ಇದು ತಂಪಾಗಿರುವಂತೆ ನೀರಿನ ಕೊಳವೆಗಳನ್ನು ಅಳವಡಿಸಲಾಗಿದೆ. ರಾಣಿಯು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಸ್ಥಳವಾಗಿದೆ. ಈ ಅಂಕಣವನ್ನು ರಾಣಿಯ ಅರಮನೆಯ ಬುನಾದಿ ನೋಡಬಹುದು ಹಾಗೂ ಇದರ ಸುತ್ತಲೂ ಕೋಟೆ ಇದ್ದು 3 ಕಾವಲು ಗೋಪುರಗಳಿವೆ.

**ಗಜ ಶಾಲೆ :**
ಇದು ಅರಸನ ಪಟ್ಟದ ಆನೆಗಳನ್ನು ಕಟ್ಟಲು ನಿರ್ಮಿಸಿದ ಕಟ್ಟಡ. ಇದು ಇಂಡೋ ಆಂಗ್ಲ ಶೈಲಿಯಲ್ಲಿ ನಿರ್ಮಿತವಾಗಿದೆ.

**ಕಿಷ್ಕಿಂದ:** ತ್ರೇತ್ರಾಯುಗದಲ್ಲಿ ಶ್ರೀ ರಾಮನು ವನವಾಸ ಮಾಡುತ್ತಾ ಈ ಸ್ಥಳಕ್ಕೆ ಬಂದು ಶ್ರೀ ಪಂಪಾಪತಿಯ ದರ್ಶನ ಪಡೆದು ಸುಗ್ರೀವ, ವಾಲಿ ಹನುಂತನನ್ನು ಭೇಟಿಯಾಗುತ್ತಾನೆ.

**ಜಂಬೂನಾಥ ದೇವಸ್ಥಾನ, ಅಂಜನಾದ್ರಿ ಪರ್ವತ :**
ಆಂಜನೇಯ ಜನ್ಮತಾಳಿದ ಅಂಜನಾದ್ರಿ ಪರ್ವತವನ್ನು ನೋಡಬಹುದು. ಈ ಪರ್ವತಕ್ಕೆ ಹೋಗುವಾಗ ಪಂಪಾಸರೋವರವನ್ನು ನೋಡಬಹುದು.

**ಕಮಲಾಪುರದಲ್ಲಿರುವ ಪ್ರಾಚ್ಯವಸ್ತು ಸಂಗ್ರಹಾಲಯ:**
ಪ್ರಾಚ್ಯವಸ್ತು ಸಂಗ್ರಹಾಲಯವು, ಹಂಪಿಯ ಎರಡು ಮಾದರಿಗಳನ್ನು ಒಳಗೊಂಡಿದ್ದು, ಈ ಪ್ರದೇಶದ ಸ್ಥಳ ವಿವರಣೆಯನ್ನು ವಿವರವಾಗಿ ತಿಳಿಸುತ್ತದೆ. ಆದ್ದರಿಂದ ಪ್ರವಾಸಿಗರು ಈ ಸ್ಥಳಕ್ಕೆ ಭೇಟಿ ನೀಡಿ ತಮಗೆ ಬೇಕಾದ ಮಾಹಿತಿಯನ್ನು ಸುಲಭವಾಗಿ ತಿಳಿಯುತ್ತಾರೆ. ಸಣ್ಣ ಮಾದರಿಯು ಗ್ಯಾಲರಿಯ ಒಳಭಾಗದಲ್ಲಿದ್ದು ರಾಯಲ್ ಸೆಂಟರನ ವಿಸ್ತಾರವಾದ ವಿವರಗಳನ್ನು ನೀಡುತ್ತದೆ. ಉತ್ಖನದಲ್ಲಿ ದೊರೆತಿರುವ ವಿಗ್ರಹಗಳುವಿಜಯನಗರಕಾಲದ ಚಿನ್ನದ ನಾಣ್ಯಗಳು, ಅವರು ಬಳಸುತ್ತಿದ್ದ ಆಯುಧಗಳು ಹಾಗೂ ವಿಜಯನಗರವು ಪುಂಡರಿಂದ ಭಗ್ನಗೊಳಗಾದ ಮೂರ್ತಿಗಳನ್ನು ನೋಡಬಹುದು.

**ಆನೆಗೊಂದಿ:**
ಗಗನ ಪ್ಯಾಲೇಸ್, ಪಂಪ ಸರೋವರ ಲಕ್ಷ್ಮಿದೇವಾಲಯ, ಶ್ರೀಕೃಷ್ಣದೇವರಾಯ ಸಮಾಧಿ, ಆನೆಗುಂಡಿ ಕೋಟೆಯ ಹೆಬ್ಬಾಗಿಲು ಹಾಗು ಏಳು ತಲೆಯ ಸರ್ಪ ಇವು ಆನೆಗುಂಡಿಯ ಕೆಲವು ಪ್ರಮುಖ ಆಕರ್ಷಣೆಗಳು. ಇಷ್ಟೇ ಅಲ್ಲದೆ ಪ್ರವಾಸಿಗರು ಶ್ರೀ ಗವಿ ರಂಗನಾಥ ಸ್ವಾಮಿ ದೇವಸ್ಥಾನ, ಗಣಪತಿ ದೇವಸ್ಥಾನ, ಚಿಂತಾಮಣಿ ಶಿವ ದೇವಸ್ಥಾನ, ಹುಚ್ಚೈಪ್ಪನ ಮಠ ಮತ್ತು ಜೈನ್ ದೇವಾಲಯಗಳಿಗು ಕೂಡ ಭೇಟಿ ನೀಡಬಹುದು.

**ತುಂಗಭದ್ರಾ ಆಣೆಕಟ್ಟೆ :**
ಇದು ಹೊಸಪೇಟೆಯಿಂದ 4 ಕಿ.ಮೀ ದೂರದಲ್ಲಿದೆ.ಇದರ ಕೆಳಬದಿಯಲ್ಲಿ ಸುಂದರವಾದ ಬೃಂದಾವನವಿದೆ. ಈ ಆಣೆಕಟ್ಟೆ ತ್ತಿರ ಸರ್ಕಾರಿ ಅತಿಥಿಗೃಹವಿದೆ. ಈ ಬೃಂದಾವನವನದಲ್ಲಿ ವಿವಿಧ ಬಣ್ಣ ರೀತಿಯ ಕಾರಂಜಿಗಳು ರಾತ್ರಿ ವೇಳೆ ಬಣ್ಣದ ದೀಪಗಳಿಂದ ಅಲಂಕೃತವಾದ ಕಾರಂಜಿಯನ್ನು ನೋಡಲು ಮನಮೋಹಕವಾಗಿದೆ.

ಕನ್ನಡ ನಾಡಿನ ಬಹುದೊಡ್ಡ ಸಾಮ್ರಾಜ್ಯವಾದ ವಿಜಯನಗರದ ಅಂದಿನ ಗತವೈಭವದ ಇತಿಹಾಸವನ್ನು ಹಂಪಿಯಲ್ಲಿ ಉತ್ಸವವಾಗಿ ನಡೆಸಬೇಕೆಂಬ ಮಹದಾಸೆ ಹೊತ್ತವರಲ್ಲಿ ನಾಡಿನ ಬಹುದೊಡ್ಡ ಸಾಂಸ್ಕೃತಿಕ ರಾಯಭಾರಿಗಳಾಗಿದ್ದ ಮಾಜಿ ಉಪಮುಖ್ಯಮಂತ್ರಿಗಳಾಗಿದ್ದ ದಿ.ಎಂ.ಪಿ.ಪ್ರಕಾಶ ಮೊದಲಿಗರು. ಉತ್ಸವ ಕುರಿತು ಅವರು ವಹಿಸಿದ್ದ ಆಸಕ್ತಿ, ಅಭಿಮಾನ, ಪ್ರೀತಿಯನ್ನ ಎಷ್ಟು ಕೊಂಡಾಡಿದರೂ ಸಾಲದು. ಅವರ ಶ್ರಮದ ಫಲವಾಗಿ ಹಂಪಿ ಉತ್ಸವಕ್ಕೆ ಒಂದು ವಿಶೇಷ ಮೆರಗು ಬಂದಿತೆಂದರೆ ತಪ್ಪಾಗಲಾರದು. ಮೊದಮೊದಲು ಸ್ಥಳೀಯ ಮಟ್ಟದಲ್ಲಿ ನಡೆದ ಹಂಪಿ ಉತ್ಸವ ನಂತರ ರಾಜ್ಯಮಟ್ಟಕ್ಕೆ ವ್ಯಾಪಿಸಿತು. ಆ ನಂತರ ವರ್ಷಗಳಲ್ಲಿ ರಾಷ್ಟಮಟ್ಟಕ್ಕೂ ಬೆಳೆದು, ಪ್ರಸಿದ್ಧ ಕಲಾವಿದರನ್ನು ಬಳಸಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆ. ಆದರೆ ಇತ್ತೀಚಿನ ಕೆಲ ವರ್ಷಗಳಲ್ಲಿ ಹಂಪಿ ಉತ್ಸವದ ಕುರಿತು ನಿರಾಸಕ್ತಿ ಮನೋಭಾವ ಮನೆ ಮಾಡುತ್ತಿದೆ. ವಿಜಯನಗರ ಅರಸರ ಮತ್ತು ಪ್ರಕಶ್‌ರ ಕನಸು ಸಾಕಾರಗೊಳ್ಳುವಲ್ಲಿ ಎಲ್ಲೋ ನಾವು ಎಡವುತ್ತಿದ್ದೇವೆ ಎನಿಸುತ್ತಿದೆ. ಈ ನಿಟ್ಟಿನಲ್ಲಿ ಗಂಭೀರ ಚಿಂತನೆಗಳು ನಡೆಯಲೇಬೇಕಿವೆ.

# ಫೆ.2ರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

**ಹಂಪಿ ಉತ್ಸವ–2024 । ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ–ವಿಜಯನಗರ ಜಿಲ್ಲಾಡಳಿತದ ಸಹಯೋಗ**

**ಫೆಬ್ರವರಿ 2, 3 ಮತ್ತು 4 । ನಾಲ್ಕು ಪ್ರಮುಖ ವೇದಿಕೆ, ಆಯ್ಕೆ ನಿಮ್ಮದು । ಮೊದಲ ದಿನ ಗ್ರಾಪಂಗೊಂದು ಉಚಿತ ಬಸ್ ವ್ಯವಸ್ಥೆ**

## ಹಂಪಿಯ ಗಾಯತ್ರಿ ಪೀಠ (ಮುಖ್ಯ ವೇದಿಕೆ)



**ಹಂಪಿ ಟೈಮ್ಸ್ ಹೊಸಪೇಟೆ:**
ಫೆ.2ರ ಸಂಜೆ 6ರಿಂದ 7 ಗಂಟೆಯವರೆಗೆ ಬೆಂಗಳೂರಿನ ಡ್ರೀಮ್ಸ್ & ಇವೆಂಟ್ಸ್ ತಂಡದಿಂದ ಚೆಮ್ಮೀನ್ & ಉಹಿರೆ ಉಹಿರೆ ಬ್ಯಾಂಡ್ ಸಂಗೀತ ಹಾಗೂ 7ರಿಂದ 7.30ರವರೆಗೆ ಕಾಂತಾರ ರಂಗತರಂಗಿ ಹಾಗೂ ಹುಲಿನೃತ್ಯ ನಡೆಯಲಿದೆ.

ಉದ್ಘಾಟನೆ ಕಾರ್ಯಕ್ರಮ ಬಳಿಕ ರಾತ್ರಿ 8.30 ರಿಂದ 8.45ರವರೆಗೆ ಬೆಂಗಳೂರಿನ ಅನುರಾಧ ಭಟ್ ಹಾಗೂ ಶಾಸ್ತ್ರೀಯ ನೃತ್ಯಗಾರರಿಂದ ಹಂಪಿಯ ವಿರೂಪಾಕ್ಷೇಶ್ವರನಿಗೆ ಭವ್ಯವಾದ ಆರಂಭಿಕ ಹಾಡು ಮತ್ತು ನೃತ್ಯ. 8.45ರಿಂದ 9ರವರೆಗೆ ಬೆಂಗಳೂರಿನ ಕರ್ನಾಟಕ ಫಿಲ್ಮ್ ಮ್ಯೂಜಿಕ್ ಅಕಾಡೆಮಿಯ ಸಂಗೀತ ಸಂಯೋಜಕರು ಹಾಗೂ ಆರಂಭಿಕ ಹಾಡುಗಾರರಿಂದ ಹಂಪಿ ಉತ್ಸವ ಗೀತೆ.

9ರಿಂದ 9.20ರವರೆಗೆ ಬೆಂಗಳೂರಿನ ಸುಮಾರಾಣಿ, ಶೃತಿ ಕಾಮತ್, ಶ್ರೀನಿವಾಸ್, ಇತರೆ ಸಂಗೀತ ಸಂಯೋಜಕರು ಹಾಗೂ ನೃತ್ಯಗಾರರಿಂದ ಸಿತಾರ್ ಸಂಯೋಜನೆ ಸಂಗೀತ ಕಾರ್ಯಕ್ರಮ. 9.20ರಿಂದ 9.40ರವರೆಗೆ ಬೆಂಗಳೂರಿನ ಗಿಚ್ಚಿಗಿಲಿಗಿಲಿ ತಂಡದಿಂದ ಹಾಸ್ಯ ಸಂಯೋಜನೆ ಕಾರ್ಯಕ್ರಮ. 9.40ರಿಂದ 10ರವರೆಗೆ ಬೆಂಗಳೂರಿನ ವಿದ್ವಾನ್ ಪ್ರವೀಣ ಗೋಡಕಿಂಡಿ ಮತ್ತು ತಂಡದಿಂದ ಕೊಳಲು ವಾದನ ಕಾರ್ಯಕ್ರಮ. 10ರಿಂದ 12 ಗಂಟೆಯವರೆಗೆ ಬೆಂಗಳೂರಿನ ವಿಜಯಪ್ರಕಾಶ, ಅನುರಾಧ, ಉಷಾ, ದಿವ್ಯಾ, ಮಂಗಳಾ ಮತ್ತು ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

## ವಿರುಪಾಕ್ಷೇಶ್ವರ ದೇವಸ್ಥಾನ ವೇದಿಕೆ

ಸಂಜೆ 5 ರಿಂದ 5.15 ರವರೆಗೆ ಕೊಟ್ಟೂರಿನ ಕುಮಾರಸ್ವಾಮಿ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ, 5.15 ರಿಂದ 5.25 ರವರೆಗೆ ಬುಕ್ಕಸಾಗರದ ಶಿವಕುಮಾರ ಆರ್. ಎಸ್ ಮತ್ತು ತಂಡದವರಿಂದ ಜಾದೂ ಪ್ರದರ್ಶನ, 5.25 ರಿಂದ 5.35 ರವರೆಗೆ ಬೆಂಗಳೂರಿನ ವಸುದೇಂದ್ರ ಎಲ್ ವೈದ್ಯ ಮತ್ತು ತಂಡದವರಿಂದ ದಾಸವಾಣಿ, 5.35 ರಿಂದ 5.45 ರವರೆಗೆ ಹೊಸಪೇಟೆಯ ವಾಲ್ಯಾನಾಯಕ್ ಮತ್ತು ತಂಡದವರಿಂದ ಜಾನಪದಗೀತೆ, 5.45 ರಿಂದ 6 ರವರೆಗ ಚಪ್ಪರದಹಳ್ಳಿಯ ಆರ್ ಜಾಹ್ನವಿಮತ್ತು ತಂಡದವರಿಂದ ಕುಚುಪುಡಿ ನೃತ್ಯ,

**6 ರಿಂದ 6.15** ರವರೆಗೆ ಹೊಸಪೇಟೆಯ ಕೆ. ಸಣ್ಣತಿಮ್ಮ ಕಾಕುಬಾಳು ಮತ್ತು ತಂಡದವರಿಂದ ಕ್ಲಾರಿನೆಟ್ ವಾದನ, 6.15 ರಿಂದ 6.30 ರವರೆಗೆ ಹೊಸಪೇಟೆಯ ಎ ಅಜಿತ್ ಕುಮಾರ್ ಮತ್ತು ತಂಡದವರಿಂದ ಕರಾಟೆ ಕಲೆ, 6.30 ರಿಂದ 6.45 ರವರೆಗೆ ದಾವಣಗೆರೆ ಗಂಗನಕಟ್ಟೆಯ ಮಾರಿಕಾಂಬ ಭಜನಾ ಮಂಡಳಿಯಿಂದ ಭಜನೆ, 6.45 ರಿಂದ 7 ರವರೆಗೆ ಹಗರಿಬೊಮ್ಮನಹಳ್ಳಿಯ ಪ್ರಿಯಾಂಕ ಎಚ್.ಬಿ ಮತ್ತು ತಂಡದವರಿಂದ ಭಾವಗೀತೆಗಳು.

**7 ರಿಂದ 7.15** ರವರೆಗೆ ಹೊಸಪೇಟೆಯ ವಿದುಷಿ ಅರುಣಾ ನಾಗರಾಜ ಮತ್ತು ತಂಡದವರಿಂದ ಭರತನಾಟ್ಯ, 7.15 ರಿಂದ 7.30 ರವರೆಗೆ



ಹರಪನಹಳ್ಳಿಯ ಮದ್ದಾನ ಕುಮಾರ ಕುಲಹಳ್ಳಿ ಮತ್ತು ತಂಡದವರಿಂದ ಸುಗಮ ಸಂಗೀತ, 7.30 ರಿಂದ 7.45 ರವರೆಗೆ ಹಡಗಲಿಯ ಪೂಜಾರ ಬಸವರಾಜಪ್ಪ ಒಳಗುಂದಿ ಮತ್ತು ತಂಡದವರಿಂದ ಹಿಂದೂಸ್ಥಾನಿ ಸಂಗೀತ, **7.45 ರಿಂದ 8** ರವರೆಗೆ ಹೊಸಪೇಟೆ ಜಂಭುನಾಥನಹಳ್ಳಿಯ ವಿರುಪಾಕ್ಷೇಶ್ವರ ಸುಡುಗಾಡು ಸಿದ್ದರ ಸಂಘದಿಂದ ಸುಡುಗಾಡು ಸಿದ್ದರ ಕೈಚಳಕ,

**8 ರಿಂದ 8.15** ರವರೆಗೆ ಹರಪನಹಳ್ಳಿ ಬಸವನಾಳುವಿನ ನೈಪುಣ್ಯ ಟ್ರಸ್ಟ್ ನಿಂದ ಜಾನಪದ ನೃತ್ಯ ಕಾರ್ಯಕ್ರಮ, 8.15 ರಿಂದ 8.30 ರವರೆಗೆ ಹಡಗಲಿಯ ಶರಾಫ ರೇಣುಕ ಮತ್ತು ತಂಡದವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 8.30 ರಿಂದ 8.45 ರವರೆಗೆ ಹೊಸಪೇಟೆಯ ಅಚಲಾ ಬಿ.ಎಸ್ ವಿಹಾನ್ ಬಸವೇಶ್ವರ ಬಡಾವಣೆ ಮತ್ತು ತಂಡದವರಿಂದ ವೀಣಾವಾದನ, 8.45 ರಿಂದ 9 ರವರೆಗೆ ಕೊಪ್ಪಳದ ಇಂಚರ ಕಾರಟಗಿ ಮತ್ತು ತಂಡದವರಿಂದ ಭರತನಾಟ್ಯ,

**9 ರಿಂದ 9.15** ರವರೆಗೆ ಕುಡುತಿನಿಯ ಚನ್ನದಾಸರ ತಬಲಾ ರಂಗಪ್ಪ ಮತ್ತು ತಂಡದವರಿಂದ ತಬಲಾ ಸೋಲೊ, 9.15 ರಿಂದ 9.30 ರವರೆಗೆ ಬೆಂಗಳೂರು ಮಹಾಲಕ್ಷ್ಮಿ ಲೇಹೌಟ್ ನ ಸ್ನೇಹ ಕಲಾವಿದರಿಂದ ರಂಗಗೀತೆಗಳು, 9.30 ರಿಂದ 9.45 ರವರೆಗೆ ಸಿಂಧನೂರಿನ ಗೌಡಪ್ಪ ಮಾಲಿಪಾಟೀಲ್ ಮತ್ತು ತಂಡದವರಿಂದ ದಿಮ್ಮಿ ತತ್ವಪದಗಳು, 9.45 ರಿಂದ 10 ರವರೆಗೆ ಹಡಗಲಿಯ ಪರುಪತ್ತರಗಾರ ಕೊಟ್ರೇಶ್ ಮತ್ತು ತಂಡದವರಿಂದ ನೃತ್ಯ ಪ್ರದರ್ಶನ,


**10 ರಿಂದ 10.15** ರವರೆಗೆ ಕುಕನೂರಿನ ಅಶೋಕಯ್ಯ ಹಿರೇಮಠ್ ಮತ್ತು ತಂಡದವರಿಂದ ಭಾವಗೀತೆಗಳು, 10.15 ರಿಂದ 10.25 ರವರೆಗೆ ಬೆಂಗಳೂರು ಚಾಮರಾಜಪೇಟೆಯ ಸುಕೃತ ಸಂಗೀತ ಮತ್ತು ನೃತ್ಯ ಶಾಲೆಯಿಂದ ಶಾಸ್ತ್ರೀಯ ನೃತ್ಯ, 10.25 ರಿಂದ 10.35 ರವರೆಗೆ ಹರಪನಹಳ್ಳಿ ಶಾಂತಿನಗರ ತಾಂಡದಿಂದ ಗಣೇಶ ಟಿ ಅವರಿಂದ ಸುಗಮ ಸಂಗೀತ, 10.35 ರಿಂದ 10.45 ರವರೆಗೆ ಹಡಗಲಿಯ ಕೆ ಕಾಳಮ್ಮ ಸೋಗಿ ಮತ್ತು ತಂಡದವರಿಂದ ಸಂಪ್ರದಾಯ ಹಾಡುಗಳು ಹಾಗೂ 10.45 ರಿಂದ 11 ರವರೆಗೆ ಹರಪನಹಳ್ಳಿಯ ಎ ಶಂಕ್ರಾಚಾರಿ ಬಾಗಳಿ ಮತ್ತು ತಂಡದವರಿಂದ ವಚನ ಗಾಯನ ಕಾರ್ಯಕ್ರಮಗಳು ನೆಡೆಯಲಿವೆ.

## ಎದುರು ಬಸವಣ್ಣ ವೇದಿಕೆ

ಫೆ.2ರಂದು ರಾತ್ರಿ 8.15 ರಿಂದ 8.45 ರವರೆಗೆ ಹೊಸಪೇಟೆ ಕಡ್ಡಿರಾಂಪುರದ ಹಂಪಿ ವಿರುಪಾಕ್ಷೇಶ್ವರ ಸಾಂಸ್ಕೃತಿಕ ಬುಡ್ಗ ಜಂಗಮ ಹಗಲುವೇಶ ಕಲಾವಿದರ ಸಂಘದಿಂದ ಹನುಮರಾಮಯಣ ಕಾರ್ಯಕ್ರಮ ನೆಡೆಯಲಿದೆ. 8.45 ರಿಂದ 9 ರವರೆಗೆ ಬೆಂಗಳೂರಿನ ವಿಶಾಲ್ ಹರಿಕಿರಣ್ ಮತ್ತು ತಂಡದವರಿಂದ ಕುಚುಪುಡಿ.

9 ರಿಂದ 9.15 ರವರೆಗೆ ಕುಷ್ಟಗಿಯ ದುರುಗಪ್ಪ ಹಿರೇಮನಿ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ. 9.15 ರಿಂದ 9.30 ರವರೆಗೆ ಬೆಂಗಳೂರಿನ ಸೃಷ್ಟಿ ಅಭಿನಯ ಕಲಾವಿದರ ಕೇಂದ್ರದ ಎ.ವಿ ಸತ್ಯನಾರಾಯಣ ಮತ್ತು ತಂಡದವರಿಂದ ನೃತ್ಯ ರೂಪಕ, 9.30 ರಿಂದ 9.45 ರವರೆಗೆ ಬಳ್ಳಾರಿಯ ಮೇದಾ ಮ್ಯೂಸಿಕಲ್ ಸ್ಕೂಲಿನ ಕೆ. ರಾಮ್ ಕಿರಣ್ ಮತ್ತು ತಂಡದವರಿಂದ ವೀಣಾ ವಾದನ, 9.45 ರಿಂದ 10 ರವರೆಗೆ ಬಳ್ಳಾರಿ ಮಣಿಕಮಠ ಸೂಪರ್ ಮಾರ್ಕೆಟ್ ನ ಎಸ್.ಪ್ರಗತಿ ಮತ್ತು ತಂಡದವರಿಂದ ಕುಚುಪುಡಿ,

10 ರಿಂದ 10.15 ರವರೆಗೆ ಬೀದರ್ ಜಿಲ್ಲೆ ನೇಮಳಖೇಡದ ಪವಿತ್ರಾ ವಿಶ್ವನಾಥ ಮತ್ತು ತಂಡದವರಿಂದ ಸುಗಮ ಸಂಗೀತ, 10.15 ರಿಂದ 10.30ರವರೆಗೆ ಧಾರವಾಡದ ವಿಶ್ವನಾಥ ಹಾವೇರಿ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ, 10.30 ರಿಂದ 10.45ರವರೆಗ ಕಲಬುರಗಿಯ ಶಂಕ್ರಪ್ಪ ಭಗವಂತಪ್ಪ ಹೂಗಾರ್ ಮತ್ತು ತಂಡದವರಿಂದ ಹಿಂದೂಸ್ಥಾನಿ ಸಂಗೀತ ಕಾರ್ಯಕ್ರಮ ಹಾಗೂ 10.45 ರಿಂದ 11.15ರವರೆಗೆ ಕೂಡ್ಲಿಗಿಯ ಕೊಟ್ಟೂರು ಮತ್ತು ಕೂಡ್ಲಿಗಿ ತಾಲೂಕಿನ ಸರ್ಕಾರಿ ನೌಕರರ ಕಲಾ ತಂಡದಿಂದ ಸಾಕ್ರೆಟಿಸ್ ನಾಟಕ ಕಾರ್ಯಕ್ರಮ ನೆಡೆಯಲಿವೆ.



## ಸಾಸಿವೆಕಾಳು ಗಣಪ ವೇದಿಕೆ

ಸಂಜೆ 4 ರಿಂದ 4.15 ರವರೆಗೆ ಹರಪನಹಳ್ಳಿ ಮತ್ತಿಹಳ್ಳಿಯ ಪಂಪಾಚಾರಿ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ನೆಡೆಯಲಿದೆ.

4.15 ರಿಂದ 4.30 ರವರೆಗೆ ಕೂಡ್ಲಿಗಿಯ ಮಂಗನಹಳ್ಳಿ ಎಚ್. ಶೇಖರಪ್ಪ ಮತ್ತು ತಂಡದವರಿಂದ ರಂಗಗೀತೆಗಳು, 4.30 ರಿಂದ 4.45 ರವರೆಗೆ ಹೂವಿನಹಡಗಲಿಯ ಎಲ್.ಪಿ ನಾಯಕ್ ಮತ್ತು ತಂಡದವರಿಂದ ಲೇಂಗಿ ನೃತ್ಯ, 4.45 ರಿಂದ 5 ರವರೆಗೆ ಕೂಡ್ಲಿಗಿ ಒಬಳಶೆಟ್ಟಿಹಳ್ಳಿಯ ಎಮ್.ಆರ್ ನುಂಕಪ್ಪ ಮತ್ತು ತಂಡದವರಿಂದ ಸುಗಮ ಸಂಗೀತ,

5 ರಿಂದ 5.15 ರವರೆಗೆ ಹರಪನಹಳ್ಳಿ ಅರಸಿಕೆರೆಯ ಗೋಂದಳ್ಳಿ ಶಿವಾಜಿ ಮತ್ತು ತಂಡದವರಿಂದ ಗೊಂದಲಿಗರ ಪದಗಳು, 5.15 ರಿಂದ 5.30 ರವರೆಗೆ ಕೊಟ್ಟೂರಿನ ಆರ್ ಎಂ ಸಿದ್ದೇಗೌಡಡ ಮತ್ತು ತಂಡದವರಿಂದ ಸುಗಮ ಸಂಗೀತ, 5.30 ರಿಂದ 5.45 ರವರೆಗೆ ಹೊಸಪೇಟೆಯ ಎಮ್ ಸುನಿತಾ ಬಾಯಿ ಮತ್ತು ತಂಡದವರಿಂದ ದಾಸರ ಭಜನೆಗಳು, 5.45 ರಿಂದ 6 ರವರೆಗೆ ಹೂವಿನ ಹಡಗಲಿಯ ವೈ ಮಲ್ಲಪ್ಪ ಗವಾಯಿ ಮತ್ತು ತಂಡದವರಿಂದ ಬಯಲಾಟ ಪದಗಳು,

6 ರಿಂದ 6.15 ರವರೆಗೆ ಹೂವಿನ ಹಡಗಲಿಯ ಕೆ ರಾಮಾಂಜನೇಯ ಮತ್ತು ತಂಡದವರಿಂದ ಜಾನಪದ ಗಾಯನ, 6.15 ರಿಂದ 6.30 ರವರೆಗೆ ಹೊಸಪೇಟೆ ಎಂ ಪಿ ಪ್ರಕಾಶ್ ನಗರದಸವಿತಾ ಅಮರೇಶ್ ಮತ್ತು ತಂಡದವರಿಂದ ಹಿಂದೂಸ್ಥಾನಿ ಸಂಗೀತ, 6.30 ರಿಂದ 7 ರವರೆಗೆ ಕೊಪ್ಪಳದ ಕೇಶಪ್ಪ ಶಿಳ್ಳೇಕ್ಯಾತೆರ ಮತ್ತು ತಂಡದವರಿಂದ ತೊಗಲು ಗೊಂಬೆ ಆಟ,

7 ರಿಂದ 8 ರವರೆಗೆ ವಿಜಯನಗರ ಜಿಲ್ಲೆಯ ಹ್ಯಾರಡದ ಜನನಿ ಪುಷ್ಪಕಲಾ ಯುವಕ ಸಂಘದಿಂದ ಕರ್ಣನ ಪಟ್ಟಾಬಿಷೇಕ ನಾಟಕ, 8 ರಿಂದ 9 ರವರೆಗೆ ಕೂಡ್ಲಿಗಿಯ ಬಣಕಾರ ಮೂಗಪ್ಪ ಮತ್ತು ತಂಡದವರಿಂದ ನಾಟಕ, 9 ರಿಂದ 10 ರವರೆಗೆ ಬಳ್ಳಾರಿಯ ಆಲಾಪ ಸಂಗೀತ ಕಲಾ ಟ್ರಸ್ಟ್ ನ ಬಿ ರಮಣಪ್ಪ ಮತ್ತು ತಂಡದವರಿಂದ ಬಯಲಾಟ ಕಾರ್ಯಕ್ರಮ.

10 ರಿಂದ 11 ರವರೆಗೆ ಕೂಡ್ಲಿಗಿ ತಾಲೂಕಿನ ಸೂಲದಹಳ್ಳಿಯ ತಿಪ್ಪೇಸ್ವಾಮಿ ಮತ್ತು ತಂಡದವರಿಂದ ಜಗಜ್ಯೋತಿ ಬಸವೇಶ್ವರ ನಾಟಕ ಕಾರ್ಯಕ್ರಮ ನೆಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.



# ಫಲಪುಷ್ಪ, ಎತ್ತುಗಳ ಪ್ರದರ್ಶನ, ರಂಗೋಲಿ ಸ್ಪರ್ಧೆ

**ಹಂಪಿ ಟೈಮ್ಸ್ ಹೊಸಪೇಟೆ**
**ಫೆ.2ರಂದು** ಬೆಳಿಗ್ಗೆ 10 ಗಂಟೆಗೆ ಕಮಲಾಪುರದ ಹವಾಮಾ ಕಚೇರಿಯ ಹಿಂಭಾಗದ ಆವರಣದಲ್ಲಿ ಎತ್ತುಗಳ ಪ್ರದರ್ಶನ, ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಮುಂಭಾಗದಲ್ಲಿ ರಂಗೋಲಿ ಸ್ಪರ್ಧೆ ಮತ್ತು ಹಂಪಿ ಗ್ರಾಮ ಪಂಚಾಯಿತಿ ಮುಂಭಾಗದ ಮಾತಂಗ ಪರ್ವತ ಮೈದಾನದಲ್ಲಿ ಫಲ ಪುಷ್ಪ ಪ್ರದರ್ಶನ ನಡೆಯಲಿದೆ. ಬೆಳಿಗ್ಗೆ 10.30ಕ್ಕೆ ಮಾತಂಗ ಪರ್ವತ ಮೈದಾನದಲ್ಲಿ ಸಾವಯವ ಮತ್ತು ಸಿರಿಧಾನ್ಯಗಳ ವಸ್ತು ಪ್ರದರ್ಶನ, ಸಿರಿಧಾನ್ಯಗಳ ಪಾಕ ಸ್ಪರ್ಧೆ, ವಿಜ್ಞಾನಿಗಳಿಂದ ಉಪನ್ಯಾಸ ಹಾಗೂ ಸಂವಾದ ಪುಸ್ತಕ ಪ್ರದರ್ಶನ, ಶಿಲ್ಪಕಲಾ ಪ್ರದರ್ಶನ ಮತ್ತು ಚಿತ್ರಕಲಾ ಪ್ರದರ್ಶನ ಕಾರ್ಯಕ್ರಮ ಹಾಗೂ ಅಂದು ಸಂಜೆ 6 ಗಂಟೆಗೆ ಆನೆ ಲಾಯ ಮತ್ತು ಕುದುರೆ ಲಾಯ ಆವರಣದಲ್ಲಿ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಜರುಗಲಿದೆ.
**ಫೆ.3ರಂದು** ಬೆಳಿಗ್ಗೆ 10 ಗಂಟೆಗೆ ಕಮಲಾಪುರದ ಹವಾಮಾ ಕಚೇರಿಯ ಹಿಂಭಾಗದ ಆವರಣದಲ್ಲಿ ಕುರಿಗಳ ಪ್ರದರ್ಶನ ಹಾಗೂ ಹೊಸ ಮಲಪನಗುಡಿಯ ವಿದ್ಯಾರಣ್ಯ ಪೀಠ ಹೈಸ್ಕೂಲ್ ಮೈದಾನದಲ್ಲಿ ಗ್ರಾಮೀಣ ಕ್ರೀಡೆಗಳು ನಡೆಯಲಿವೆ.
**ಫೆ.4ರಂದು** ಬೆಳಿಗ್ಗೆ 10.30 ಗಂಟೆಗೆ ಕಮಲಾಪುರದ ಹವಾಮಾ ಕಚೇರಿಯ ಹಿಂಭಾಗದ ಆವರಣದಲ್ಲಿ ಶ್ವಾನ ಪ್ರದರ್ಶನ ಹಾಗೂ ಮಧ್ಯಾಹ್ನ 3ಕ್ಕೆ ಉದ್ದಾನ ವೀರಭದ್ರೇಶ್ವರ ದೇವಸ್ಥಾನದಲ್ಲಿ ಜಾನಪದ ವಾಹಿನಿ ಕಾರ್ಯಕ್ರಮ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

# ಹೊಸಪೇಟೆಯಲ್ಲಿ ವಾಹನಗಳ ಸಂಚಾರಕ್ಕೆ ಮಾರ್ಗ ಬದಲಾವಣೆ

**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಉತ್ಸವಕ್ಕಾಗಿ ಫೆ.2ರಂದು ಸಿಎಂ ಹಾಗೂ ಇತರ ಗಣ್ಯರು ಹೊಸಪೇಟೆಗೆ ಭೇಟಿ ನೀಡುವ ಹಿನ್ನೆಲೆಯಲ್ಲಿ ಹೊಸಪೇಟೆಗೆ ಆಗಮಿಸುವ ಕೆ.ಎಸ್.ಆರ್.ಟಿ.ಸಿ ಬಸ್‌ಗಳು ಸೇರಿದಂತೆ ಇತರ ವಾಹನಗಳ ಸಂಚಾರದ ಮಾರ್ಗ ಬದಲಾವಣೆ ಮಾಡಿ ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ ಆದೇಶಿಸಿದ್ದಾರೆ.
ಹೊಸಪೇಟೆ ನಗರಕ್ಕೆ ಆಗಮಿಸುವ ಮತ್ತು ನಗರದಿಂದ ಹೊರ ಹೋಗುವ ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಸೇರಿದಂತೆ ಭಾರಿ ವಾಹನಗಳ ಮಾರ್ಗ ಬದಲಾವಣೆ ಮಾಡುವುದು ಅವಶ್ಯವಿರುವುದರಿಂದ. ಫೆ.2ರಂದು ಸಂಜೆ 4 ರಿಂದ ರಾತ್ರಿ 8 ಗಂಟೆಯವರೆಗೆ ಬೆಂಗಳೂರು ಹಾಗೂ ಕೊಪ್ಪಳ ದಿಂದ ಬರುವ ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ವಿರುಪಾಕ್ಷ ನಾಯಕ ವೃತ್ತ, ಗುರು ಕಾಲೇಜ್ ಸರ್ಕಲ್, ಎ.ಪಿ.ಎಂ.ಸಿ. ಸರ್ಕಲ್, ಮಾರ್ಕೇಂಡೇಶ್ವರ ಸರ್ಕಲ್, ವಾಲ್ಮೀಕಿ ಸರ್ಕಲ್, ರಾಮ ಸರ್ಕಲ್ ಮುಖಾಂತರ ಹೊಸಪೇಟೆ ನಗರದಲ್ಲಿ ಪ್ರವೇಶಿಸಿ ಅದೇ ಮಾರ್ಗವಾಗಿ ಹೊರಹೋಗಬೇಕು. ಬೆಂಗಳೂರು ಮತ್ತು ಕೊಪ್ಪಳ ಕಡೆಯಿಂದ ಬಂದು ಕಮಲಾಪುರ ಮತ್ತು ಕಂಪ್ಲಿ ಕಡೆ ಹೋಗುವ ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಮತ್ತು ಭಾರಿ ವಾಹನಗಳು ವಿರುಪಾಕ್ಷ ನಾಯಕ ವೃತ್ತದಿಂದ ಬೈಪಾಸ್ ರಸ್ತೆಯಲ್ಲಿ ಸಂಡೂರು ಸರ್ಕಲ್, ಜಂಬುನಾಥ ಸರ್ಕಲ್, ಇಂಗಳಿಗೆ, ಪಿ.ಕೆ.ಹಳ್ಳಿ ಮುಖಾಂತರ ಕಮಲಾಪುರ ಮಾರ್ಗವಾಗಿ ಹೋಗಬೇಕು. ಅದೇ ದಿನ ಸಂಜೆ 5.30 ರಿಂದ ಸಂಜೆ 7 ಗಂಟೆಯವರೆಗೆ ಎ.ಪಿ.ಎಂ.ಸಿ. ಸರ್ಕಲ್ ಮುಖಾಂತರ ಮತ್ತು ಸಾಯಿ ಬಾಬ್ ಸರ್ಕಲ್ ಮುಖಾಂತರ ಹೋಗುವ ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಜಿಲ್ಲಾ ಪೊಲೀಸ್, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ ವಿಭಾಗೀಯ ನಿಯಂತ್ರಕರು, ಸಹಾಯಕ ಆಯುಕ್ತರು, ಸಂಬಂಧಪಟ್ಟ ತಹಶೀಲ್ದಾರರು ಮತ್ತು ಸಂಚಾರ ಪೊಲೀಸ್ ಅಧಿಕಾರಿಗಳು ಅಗತ್ಯಕ್ರಮವಹಿಸುವಂತೆ ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

## ಕವಿ ಮನಸು

### ವಿಜಯನಗರ ಹಂಪಿ

ನಾವಿರುವುದು ಹೊಸಪೇಟೆ ಚಂದದ ನಗರ
ಸುತ್ತಲೂ ಹಸಿರು ಗಿರಿ ಶಿಖರಗಳ ಆಗರ
ಏಳೆಂಟು ಕಿ.ಮೀ.ಅಂತರ ಹಂಪಿ
ವಿಜಯನಗರ ಅದುವೇ ವಿಜಯನಗರ
ಶಿಲ್ಪಿಗಳ ಸುಂದರ ಆಗರ ।
ಹುಕ್ಕ ಬುಕ್ಕರು ಸ್ಥಾಪಿಸಿದ ಹಂಪಿ
ವಿಜಯನಗರ
ಜಗದ್ವಿಖ್ಯಾತಿ ಪಡೆದ ಶ್ರೇಷ್ಠ ಶಿಲ್ಪಗಳ ಆಗರ
ಹಂಪಿ ವಿರೂಪಾಕ್ಷ ಎತ್ತರದ ಗೋಪುರದ
ಅಂದ
ಸೂಕ್ಷ್ಮ ಕೆತ್ತನೆ ವಿಧವಿಧ ಶಿಲ್ಪಗಳು
ನೋಡಲಂದ।
ಹಂಪಿಯ ಏಕಶಿಲೆಯ ವೈಭವದ ಕಲ್ಲಿನ
ತೇರು
ನವಿರಾದ ಶಿಲೆ ಕೆತ್ತನೆಗೆ ಜಗದ ಪರಿಣಿತರು
ಮಾರು
ವಿಜಯ ವಿಠಲನ ಕಲ್ಲಿನ ಕಂಬಗಳು ಕೆತ್ತನೆ
ಸೊಗಸು
ಸರಿಗಮ ಪದನಿಸ ರಾಗಗಳ ಕಂಬಗಳಲಿ
ಛಾರಿಸು।
ಬಡವಿ ಲಿಂಗ ಉಗ್ರ ನರಸಿಂಹ ಶಿಲ್ಪಿ ಕೆತ್ತನೆ
ಕೆಲಸ
ಏಕೆ ಶಿಲೆ ಉದ್ದಾನ ವೀರಭದ್ರೇಶ್ವರ ದರ್ಶನ
ಸಂತಸ
ಎಲ್ಲಾ ದರ್ಶನ ಪಡೆಯಲು ಬೇಕು
ನೂರಾರು ದಿವಸ
ಎಷ್ಟು ನೋಡಿದರೂ ಆಗದು ಕಣ್ಣಿಗೆ
ಪ್ರಯಾಸ।


– ಚಂದ್ರಶೇಖರಯ್ಯ ರೋಣದಮಠ


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com





## ತುಂಗಭದ್ರಾ ನೀರಿನ ಮಟ್ಟ



| ಗುರುವಾರ : 01-02-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.34 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 355 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.701 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1616.16 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 7888 ಕ್ಯುಸೆಕ್ |
| ಸಾಮರ್ಥ್ಯ | 51.220 ಟಿಎಂಸಿ |


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.




ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

# ಉತ್ಸವಕ್ಕೆ ವಸಂತ ವೈಭವದ ಮೆರುಗು

**ಹಂಪಿ ಉತ್ಸವಕ್ಕೆ ಕ್ಷಣಗಣನೆ । ರಾಜ್ಯದ ವಿವಿಧ ಭಾಗಗಳಿಂದ ನೂರಕ್ಕೂ ಹೆಚ್ಚು ಕಲಾತಂಡಗಳು ಭಾಗಿ । ನೃತ್ಯ ಪ್ರಕಾರಗಳನ್ನು ವೀಕ್ಷಿಸಿದ ಜನತೆ**

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2024ಕ್ಕೆ ಹೊಸಪೇಟೆ ನಗರದ ಪ್ರಮುಖ ರಸ್ತೆಗಳು ವಿದ್ಯುತ್ ದೀಪಗಳಿಂದ ಸಿಂಗಾರಗೊಂಡಿವೆ. ಬೀದಿಗಳಿಗೆ ಅಳವಡಿಸಿರುವ ಬೆಳಕಿನ ತೋರಣ ಹಂಪಿ ಉತ್ಸವಕ್ಕೆ ಸರ್ವರನ್ನು ಸ್ವಾಗತಿಸುತ್ತಿದೆ. ಹಂಪಿ ಉತ್ಸವದ ಕ್ಷಣಗಣನೆ ನಡುವೆ, ಗುರುವಾರ ನಗರದ ವಡಕರಾಯನ ದೇವಸ್ಥಾನದ ಬಳಿ, ವಸಂತ ವೈಭವ ಮೆರವಣಿಗೆ ವಿಜಯನಗರ ಶಾಸಕರಾದ ಹೆಚ್.ಆರ್.ಗವಿಯಪ್ಪ ಚಾಲನೆ ನೀಡಿದರು.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿರುವ ನೂರಕ್ಕೂ ಹೆಚ್ಚು ಕಲಾತಂಡಗಳು, ಕಂಸಾಳೆ, ಪೂಜಾಕುಣಿತ, ಕರಡಿ ಮಜಲು, ಲಂಬಾಣಿ ನೃತ್ಯ, ಚಿಲಿಪಿಲಿ ಗೊಂಬೆ, ಆಲಾಯಿ ಹೆಜ್ಜೆಮೇಳ, ಸೋಮನ ಕುಣಿತ, ಮಹಿಳಾ ವೀರಗಾಸೆ, ಕೊಂಬು ಕಹಳೆ, ಚಂಡೆ ವಾದನ, ಝಾಂಜ್ ಮೇಳ, ಮೋಜಿನ ಗೊಂಬೆ, ಜಗ್ಗಲಿಗಿ, ಖಡ್ಗವರಸೆ, ನವಿಲು ಕುಣಿತ, ಮರಗಾಲು ಬೀಸು, ಕಂಸಾಳೆ, ಸಿಂಧೋಳ ಕುಣಿತ, ಸಮಾಳ ಮತ್ತು ನಂದಿಕೋಲು, ಕುದುರೆ ಕುಣಿತ, ನಾದಸ್ವರ, ಡೊಳ್ಳುಕುಣಿತ, ಕೋಲಾಟ, ಹಗಲು ವೇಷ, ತಾಷಾರಂಡೋಲ್, ಗೊಂದಲಿಗರಹಾಡು, ಗೊರವರ ಕುಣಿತ, ಹೀಗೆ ಹಲವಾರು ನೃತ್ಯ ಪ್ರಕಾರಗಳುಆನೆ ಹಾಗೂ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ತಾಯಿ ಭುವನೇಶ್ವರಿ ದೇವಿ ಮೂರ್ತಿಯನ್ನು ಅಲಂಕೃತಗೊಂಡ ಟ್ರ್ಯಾಕ್ಟರ್ ಇರಿಸಿ ನಗರದ ಡಾ.ಪುನೀತ್ ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣದವರೆಗೆ ಅದ್ದೂರಿ ಮೆರವಣಿಗೆ ಕೊಂಡೊಯ್ಯಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ಜಿ.ಪಂ.ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವಪ್ರಭು ಬಿ., ಉಪವಿಭಾಗಧಿಕಾರಿ ಮಹದ್‌ಅಲಿ ಅಕ್ರಂ ಷಾ, ತಹಶಿಲ್ದಾರ್ ವಿಶ್ವಜಿತ್ ಮೆಹ್ತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣವರ್ ಸೇರಿದಂತೆ ಮತ್ತಿತರರು ಇದ್ದರು.








**ಮೈಕ್ರೋ ನ್ಯೂಸ್**

## ಸಂವಿಧಾನ ಜಾಗೃತಿ ಜಾಥಾ

**ಹಂಪಿ ಟೈಮ್ಸ್ ಹೊಸಪೇಟೆ**

ತಾಲ್ಲೂಕು ಸಮಾಜಕಲ್ಯಾಣ ಇಲಾಖೆ ವತಿಯಿಂದ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಬುಧವಾರ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮ ನಡೆಯಿತು. ಜಾಥದಲ್ಲಿ ಸಂವಿಧಾನದ ಮಹತ್ವ ಹಾಗೂ ಮೌಲ್ಯದ ಕುರಿತು ಅರಿವು, ರಾಷ್ಟ್ರೀಯ ಏಕತೆಯನ್ನು ಎತ್ತಿಹಿಡಿಯುವ ಕುರಿತು ಜಾಗೃತಿ ಮೂಡಿಸಲಾಯಿತು.

ಹೊಸೂರಿನ ಬೀದಿಗಳಲ್ಲಿ ಜಾಥಾ ಸಂಚರಿಸಿತು. ಸಂವಿಧಾನದ ಪೀಠಿಕೆಯ ಹಸ್ತಪ್ರತಿಗಳನ್ನು ಹಂಚಿದರು. ಸ್ತಬ್ಧಚಿತ್ರ ಮೆರವಣಿಗೆ ನಡೆಯಿತು. ಈ ಸಂದರ್ಭದಲ್ಲಿ ತಹಶೀಲ್ದಾರರು ವಿಶ್ವಜೀತ್ ಮೆಹ್ತಾ, ತಾಪಂ ಇಒ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು, ಸಹಾಯಕ ನಿರ್ದೇಶಕರು, ಮತ್ತು ಹೊಸೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು, ಸರ್ವಸದಸ್ಯರು ಇದ್ದರು. ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ನಂತರ ನಾಗೇನಹಳ್ಳಿ, ಮಲಪನಗುಡಿ ಗ್ರಾಮ ಪಂಚಾಯತ್, ಹಂಪಿ ಗ್ರಾಮ ಪಂಚಾಯತ್ ಮತ್ತು ಕಮಲಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸಂವಿಧಾನ ಜಾಗೃತಿ ಜಾಥಾ ನಡೆಯಿತು. ಪಟ್ಟಣ ಹಾಗೂ ತಾಲೂಕು ಮಟ್ಟದ ಜನ ಪ್ರತಿನಿಧಿಗಳನ್ನು, ಹಾಗೂ ಎಲ್ಲಾ ದಲಿತಪರ, ಕನ್ನಡಪರ, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.



# ಹಂಪಿ, ತುಂಗಭದ್ರ ನೋಟ ಸೊಗಸು

## ಫೆ.1ರಿಂದ 4ರವರೆಗೆ ಎರಡು ಹೆಲಿಕ್ಯಾಪ್ಟರ್‌ಗಳು ಹಾರಾಟ

## ಡಿಸಿ ದಿವಾಕರ ಹೇಳಿಕೆ । 2 ವರ್ಷದೊಳಗಿನ ಮಕ್ಕಳಿಗೆ ಉಚಿತ




**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವದ ಅಂಗವಾಗಿ ಪ್ರವಾಸೋದ್ಯಮ ಇಲಾಖೆಯಿಂದ ಫೆಬ್ರವರಿ 01 ರಿಂದ 05ರ ವರೆಗೆ ಹಮ್ಮಿಕೊಳ್ಳಲಾದ ಹಂಪಿ ಬೈ ಸ್ಕೈ (ಆಗಸದಿಂದ ಹಂಪಿ) ಕಾರ್ಯಕ್ರಮಕ್ಕೆ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.

ಕಮಲಾಪುರದ ಹೋಟೆಲ್ ಮಯೂರ ಭುವನೇಶ್ವರಿ ಆವರಣದಲ್ಲಿ ಫೆ.01ರಂದು ನಡೆದ ಉದ್ಘಾಟನೆ ಕಾರ್ಯಕ್ರಮದ ನಂತರ ಜಿಲ್ಲಾಧಿಕಾರಿಗಳು ಹೆಲಿಕ್ಯಾಪ್ಟರ್‌ನಲ್ಲಿ ಸಂಚರಿಸಿದರು. ಬಳಿಕ ಮಾತನಾಡಿದ ಅವರು, ಹಂಪಿ ಉತ್ಸವದ ಮೊದಲನೇ ಭಾಗವಾಗಿ ಬುಧವಾರದಂದು ತುಂಗಾರತಿಯನ್ನು ಪೂಜಿಸಿ, ಎರಡನೇ ದಿನವಾದ ಫೆ.1ರಂದು ಹೊಸಪೇಟೆಯಿಂದ ಹಂಪಿವರೆಗೆ ಬೈಕ್ ರ್‍ಯಾಲಿ ಮೂಲಕ ಹಂಪಿ ದೇವಸ್ಥಾನಕ್ಕೆ ಭೇಟಿ ನೀಡಲಾಗಿದೆ. ಪ್ರತಿವರ್ಷದಂತೆ ಹಾಗೂ ನಾಗರಿಕರ ಕೋರಿಕೆಯಂತೆ ಆಕಾಶದಿಂದ ಹಂಪಿಯು ಯಾವ ರೀತಿಯಲ್ಲಿ ಕಾಣಿಸುತ್ತದೆ ಎಂಬ ವಿಶೇಷ ಅನುಭವನ್ನು ಮೂಡಿಸುವ ಹಂಪಿ ಬೈ ಸ್ಕೈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಹಂಪಿ ಬೈ ಸ್ಕೈನಲ್ಲಿ ಫೆ.1ರಿಂದ 4ರವರೆಗೆ ಎರಡು ಹೆಲಿಕ್ಯಾಪ್ಟರ್‌ಗಳು ಹಾರಾಟ ಮಾಡಲಿವೆ. ಹಿಂದಿನ ವರ್ಷದಲ್ಲಿ ನಿಗದಿಪಡಿಸಿದ್ದ ದರವನ್ನೇ ಈ ವರ್ಷವು ನಿಗದಿಪಡಿಸಲಾಗಿದ್ದು, 8 ನಿಮಿಷಗಳ ಕಾಲ ಹಾರಟಕ್ಕೆ ಪ್ರತಿ ವ್ಯಕ್ತಿಗೆ ಶುಲ್ಕ ರೂ.4299 ಮತ್ತು 7 ನಿಮಿಷಗಳ ಹಾರಾಟಕ್ಕೆ ರೂ.3800 ಟಿಕೆಟ್‌ದರ ನಿಗದಿಪಡಿಸಿದೆ. 2 ವರ್ಷದೊಳಗಿನ ಮಕ್ಕಳಿಗೆ ಯಾವುದೇ ಶುಲ್ಕವಿರುವುದಿಲ್ಲ. ಬೈ ಸ್ಕೈ ಮೂಲಕ ಹಂಪಿಯ ಪರಿಸರದ ಸ್ಮಾರಕಗಳು, ತುಂಗಾಭದ್ರ ಜಲಾಶಯ ಹಾಗೂ ಇತರೆ ಸ್ಥಳಗಳ ವೀಕ್ಷಣೆ ಮಾಡಬಹುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ., ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕರಾದ ಪ್ರಭುಲಿಂಗ ಎಸ್ ತಳಕೇರಿ, ಹೊಸಪೇಟೆ ತಹಶೀಲ್ದಾರರಾದ ವಿಶ್ವಜಿತ್ ಮೆಹ್ತಾ, ಹೋಟೆಲ್ ಮಯೂರ ಭುವನೇಶ್ವರಿ ವ್ಯವಸ್ಥಾಪಕರಾದ ಸುನೀಲ್ ಕುಮರ್, ಜೆ.ಎಲ್.ಆರ್ ವ್ಯವಸ್ಥಾಪಕರಾದ ಮುನಿರಾಜು, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಸೇರಿದಂತೆ ಹಂಪಿ ಬೈ ಸ್ಕೈ ಸಮಿತಿ ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು, ಪ್ರವಾಸೋದ್ಯಮ ಇಲಾಖೆ ಸಿಬ್ಬಂದಿ ಹಾಗೂ ಮತ್ತಿತರಿದ್ದರು.


ಹಂಪಿ ಬೈ ಸ್ಕೈ ಲೋಹದ ಹಕ್ಕಿಯಲ್ಲಿ ಹಾರಾಡುವ ಭಾಗ್ಯ ನಿಮ್ಮದು, ನೋಡುವ ಭಾಗ್ಯ ನಮ್ಮದೆಂದು ಕೈಬೀಸಿ ನಗುಬೀರಿದ ಬಾಲಕರು




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA